# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ದಾವಣಗೆರೆ
ಶುಕ್ರವಾರ, ಜೂನ್ 18, 2021

ಸಂಪುಟ : 48 ಸಂಚಿಕೆ : 35 ☎ 254736 91642 99999 RNI No: 27369/75, KA/SK/CTA-275/2021-2023. O/P @ J.D. Circle P.O. ಪುಟ : 4 ರೂ : 4.00 www.janathavani.com janathavani@mac.com




ದಾವಣಗೆರೆ ನಗರಕ್ಕೆ ಸಮೀಪದ ದೊಡ್ಡಬಾತಿ ಜಮೀನಿನಲ್ಲಿ ಮೆಕ್ಕೆಜೋಳ ಬಿತ್ತನೆ ಮಾಡುತ್ತಿರುವ ರೈತರು.

## ಜಿಲ್ಲೆಯಲ್ಲಿ ಚುರುಕುಗೊಂಡ ಬಿತ್ತನೆ

### 2,43,698 ಹೆಕ್ಟೇರ್ ಪ್ರದೇಶ ಬಿತ್ತನೆ ಗುರಿ, 21,638 ಹೆಕ್ಟೇರ್ ಬಿತ್ತನೆ

ದಾವಣಗೆರೆ, ಜು.17- ಜಿಲ್ಲೆಯಲ್ಲಿ ಉತ್ತಮ ಮಳೆ ಬೀಳುತ್ತಿದ್ದಂತೆ ಮುಂಗಾರು ಹಂಗಾಮಿನ ಬಿತ್ತನೆ ಚುರುಕುಗೊಂಡಿದೆ.

88,002 ಹೆಕ್ಟೇರ್ ನೀರಾವರಿ ಪ್ರದೇಶ ಹಾಗೂ 1,55,696 ಹೆಕ್ಟೇರ್ ಮಳೆಯಾಶ್ರಿತ ಪ್ರದೇಶ ಸೇರಿ ಜಿಲ್ಲೆಯಲ್ಲಿ ಒಟ್ಟಾರೆ 2,43,698 ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆ ಗುರಿ ಹೊಂದಲಾಗಿದೆ.

ಜು.16ನೇ ತಾರೀಖಿನ ಮಾಹಿತಿಯಂತೆ ಮಳೆಯಾಶ್ರಿತ 19,413 ಹೆ.ಪ್ರದೇಶ ಸೇರಿ ಜಿಲ್ಲೆಯಲ್ಲಿ ಈಗಾಗಲೇ 21,638 ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆಯಾಗಿದೆ.

ಮುಸುಕಿನ ಜೋಳದ ನಡುವೆ ಅಂತರ ಬೆಳೆಯಾಗಿ ತೊಗರಿ ಬೆಳೆಯಲು ಬಹುತೇಕ ರೈತರು ಮುಂದೆ ಬಂದಿರುವುದು ಈ ವರ್ಷದ ವಿಶೇಷ. ಹೀಗಾಗಿ ಈ ವರ್ಷ ತೊಗರಿ ಬಿತ್ತನೆ ಆಶಾದಾಯಕವಾಗಲಿದೆ ಎನ್ನುವುದು ಜಿಲ್ಲಾ ಜಂಟಿ ಕೃಷಿ ನಿರ್ದೇಶಕ ಶ್ರೀನಿವಾಸ್ ಚಿಂತಾಲ್ ಅವರ ಅಭಿಪ್ರಾಯ.

ದಾವಣಗೆರೆ ತಾಲ್ಲೂಕಿಗೆ ನಿಗದಿಯಾಗಿದ್ದ ಬಿತ್ತನೆ 63404 ಹೆಕ್ಟೇರ್ ಪ್ರದೇಶದ ಪೈಕಿ 3445 ಹೆಕ್ಟೇರ್ ಬಿತ್ತನೆಯಾಗಿದೆ. ಹರಿಹರ ತಾಲ್ಲೂಕಿನಲ್ಲಿ 32000 ಹೆಕ್ಟೇರ್ ಗುರಿ ಪೈಕಿ 1856 ಹೆಕ್ಟೇರ್, ಜಗಳೂರು 54000 ಹೆ.ಪೈಕಿ 6466, ಹೊನ್ನಾಳಿ (3ನೇ ಪುಟಕ್ಕೆ)

### ಮುಸುಕಿನ ಜೋಳದಲ್ಲಿ ಅಂತರ ಬೆಳೆಯಾಗಿ ತೊಗರಿಗೆ ಒಲವು



**ಈ ಬಾರಿ ಮುಂಗಾರು ಉತ್ತಮವಾಗಿದ್ದು, ಜಿಲ್ಲೆಯಲ್ಲಿ ಬಿತ್ತನೆ ಕಾರ್ಯ ಚುರುಕಿನಿಂದ ನಡೆಯುತ್ತಿದೆ.**

**ವಿಶೇಷವಾಗಿ ಹೆಚ್ಚಿನ ರೈತರು ಮುಸುಕಿನ ಜೋಳದಲ್ಲಿ ತೊಗರಿಯನ್ನು ಅಂತರ ಬೆಳೆಯನ್ನಾಗಿ ಬೆಳೆಯಲು ಮುಂದೆ ಬರುತ್ತಿದ್ದಾರೆ. ಅವರಿಗೆ 2 ಹಾಗೂ 5 ಕೆ.ಜಿ. ಪ್ಯಾಕೆಟ್ ತೊಗರಿ ಬಿತ್ತನೆ ಬೀಜದ ಪ್ಯಾಕೆಟ್ ನೀಡಲಾಗುತ್ತಿದೆ. ಜಿಲ್ಲೆಯಲ್ಲಿ ಬಿತ್ತನೆ ಬೀಜ ಹಾಗೂ ಗೊಬ್ಬರಕ್ಕೆ ಯಾವುದೇ ಕೊರತೆಯಾಗದಂತೆ ಕ್ರಮ ವಹಿಸಲಾಗಿದೆ.**


**ರೋಹಿಣಿ ಮಳೆ ಉತ್ತಮವಾಗಿ ಬಂದಿದ್ದರೆ ಬಿತ್ತನೆ ಮತ್ತಷ್ಟು ಬೇಗನೆ ಆರಂಭವಾಗುತ್ತಿತ್ತು. ಆ ವೇಳೆ ಶೇ.3ರಷ್ಟು ಮಾತ್ರ ಬಿತ್ತನೆಯಾಗಿತ್ತು. ಆದರೆ ಕಳೆದ 7ನೇ ತಾರೀಖಿನಿಂದ ಬೀಳುತ್ತಿರುವ ಮೃಗಶಿರ ಮಳೆ ಉತ್ತಮವಾಗಿದ್ದು, ಬಿತ್ತನೆ ಚುರುಕುಗೊಂಡಿದೆ.**

# ಬಿಜೆಪಿಯ ಬಣ ಸ್ಫೋಟ

## ವರಿಷ್ಠರ ಎದುರು ಯಡಿಯೂರಪ್ಪ ಪರ-ವಿರುದ್ಧ ಶಾಸಕರ ವಕಾಲತ್ತು

ಬೆಂಗಳೂರು, ಜೂ. 17 - ಪಕ್ಷ ಹಾಗೂ ರಾಜ್ಯದ ಹಿತದೃಷ್ಟಿಯಿಂದ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ನಾಯಕತ್ವ ಬದಲಾಯಿಸುವಂತೆ ಆಡಳಿತ ಪಕ್ಷದ ಕೆಲ ಸಚಿವರು, ಶಾಸಕರು ವರಿಷ್ಠರ ಮುಂದೆ ಒತ್ತಡ ಹೇರಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಮತ್ತೆ ಕೆಲವರು ಯಡಿಯೂರಪ್ಪ ಅವರ ನಾಯಕತ್ವ ಬದಲಾವಣೆ ಬೇಡ, ಮುಂದಿನ ಚುನಾವಣೆಯನ್ನು ಅವರ ನಾಯಕತ್ವದಲ್ಲೇ ನಡೆಸೋಣ. ಅವರ ವಿರುದ್ಧ ಅಪಸ್ವರ ಎತ್ತಿದವರಿಗೆ ಇಂದೇ ಇತಿಶ್ರೀ ಹಾಡಿ ಎಂದು ಆಗ್ರಹಿಸಿದ್ದಾರೆ.



ಇದೆಲ್ಲವೂ ನಡೆದಿದ್ದು, ರಾಜ್ಯ ಉಸ್ತುವಾರಿ ಹೊಣೆ ಹೊತ್ತ ಬಿಜೆಪಿಯ ಪ್ರಧಾನ ಕಾರ್ಯದರ್ಶಿ ಅರುಣ್ ಸಿಂಗ್ ಸಮ್ಮುಖದಲ್ಲೇ. ಕಳೆದ ಎರಡು ದಿನಗಳಿಂದ ರಾಜ್ಯ ನಾಯಕತ್ವ ಗೊಂದಲಕ್ಕೆ ಪರಿಹಾರ ಕಂಡು ಹಿಡಿಯಲು ಮೂರು ದಿನಗಳ ಪ್ರವಾಸ ಕೈಗೊಂಡಿರುವ ಅರುಣ್‌ಸಿಂಗ್ ಅವರ ಮುಂದೆಯೇ ರಾಜ್ಯ ಬಿಜೆಪಿಯ ಬಣ ಸ್ಫೋಟಗೊಂಡಿತು.

ಇಂದು ಇಡೀ ದಿನ ಅರುಣ್‌ಸಿಂಗ್ ಶಾಂತಚಿತ್ತವಾಗಿ ಪಕ್ಷದ ಶಾಸಕರು ಮತ್ತು ಸಚಿವರ ಅಭಿಪ್ರಾಯವನ್ನು ಆಲಿಸಿ, ಅವರ ಮನವಿಗಳನ್ನು ಟಿಪ್ಪಣಿ ಮಾಡಿಕೊಂಡರು.

ಅವರು ಎಲ್ಲಿಯೂ ತಮ್ಮ ಅನಿಸಿಕೆಯನ್ನು ವ್ಯಕ್ತಪಡಿಸಲಿಲ್ಲ. ಎಲ್ಲರ ಹೇಳಿಕೆಯನ್ನು ಶಾಂತಚಿತ್ತವಾಗಿ ಪಡೆದಿದ್ದಾರೆ. ಕೆಲವು ಶಾಸಕರು ಮೌಖಿಕವಾಗಿ ತಮ್ಮ ಅಭಿಪ್ರಾಯಗಳನ್ನು ಹೇಳಿಕೊಂಡರೆ, ಮತ್ತೆ ಕೆಲವರು ಲಿಖಿತವಾಗಿ ಹೇಳಿಕೆ ನೀಡಿದ್ದಾರೆ.

ಒಟ್ಟಾರೆ ಚಿತ್ರಣ ನೋಡಿದರೆ, ಮೇಲ್ನೋಟಕ್ಕೆ ಮುಖ್ಯಮಂತ್ರಿ ಪರ ಎಂದು ಹೊರಗೆ ಕೇಳಿ ಬರುತ್ತವೆ. ಆದರೆ ಒಳಗೆ ಮಾತ್ರ ಬದಲಾವಣೆಗೆ ಹೆಚ್ಚು ಒತ್ತಡ ಬಂದಂತಿದೆ ಎಂದು ಮೂಲಗಳು ಹೇಳಿವೆ. ಬದಲಾವಣೆ ಕೇಳಿದವರು, ಮುಂದೆ ಯಾರನ್ನು ನಾಯಕನನ್ನಾಗಿ ಮಾಡಬೇಕೆಂದು ಹೇಳಿಲ್ಲ. ಪಕ್ಷದ ವರಿಷ್ಠರ ತೀರ್ಮಾನಕ್ಕೆ ಬದ್ಧ ಎಂದಿದ್ದಾರೆ. 2023ರ ವಿಧಾನಸಭಾ ಚುನಾವಣೆಯಲ್ಲಿ ಪಕ್ಷ ಅಧಿಕಾರಕ್ಕೆ ಬರಬೇಕೆಂದರೆ, (2ನೇ ಪುಟಕ್ಕೆ)

### ಇಲಾಖೆಗಳಲ್ಲಿ ವಿಜಯೇಂದ್ರ ಹಸ್ತಕ್ಷೇಪ

ಬೆಂಗಳೂರು, ಜೂ. 17 - ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರನ್ನು ಬದಲಾಯಿಸಿ, ಹೊಸಬರನ್ನು ಆ ಸ್ಥಾನಕ್ಕೆ ತರಬೇಕೆಂದು ಮಾಜಿ ಸಚಿವ ವಿಧಾನ ಪರಿಷತ್ ಸದಸ್ಯ ಹೆಚ್. ವಿಶ್ವನಾಥ್ ತಿಳಿಸಿದ್ದಾರೆ.



ಅರುಣ್‌ಸಿಂಗ್ ಅವರ ಭೇಟಿಯ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಯಡಿಯೂರಪ್ಪ ಮತ್ತು ಅವರ ಕುಟುಂಬದ ವಿರುದ್ಧ ಹರಿಹಾಯ್ದರು.

ಜೆಡಿಎಸ್‌ನಂತೆ ಯಡಿಯೂರಪ್ಪ ಸರ್ಕಾರವೂ ಕುಟುಂಬದ ಇಕ್ಕಳಕ್ಕೆ ಸಿಲುಕಿದೆ. ಇಂತಹ ರಾಕ್ಷಸ ಕಪಿಮುಷ್ಟಿಯಿಂದ ಬಿಡಿಸಿ ಎಂದು ನಾನು ವರಿಷ್ಠರಲ್ಲಿ ಮನವಿ ಮಾಡಿದ್ದೇನೆ. ಮುಖ್ಯಮಂತ್ರಿ ಅವರ ಪುತ್ರ ವಿಜಯೇಂದ್ರ ಎಲ್ಲ ಇಲಾಖೆಗಳಲ್ಲೂ ಹಸ್ತಕ್ಷೇಪ ಮಾಡಿ, (2ನೇ ಪುಟಕ್ಕೆ)

### ಸರ್ಕಾರ ಇಲ್ಲದೇ ಅರಾಜಕ ಪರಿಸ್ಥಿತಿ



ಬೆಂಗಳೂರು, ಜೂ. 17 - ಭಾರತೀಯ ಜನತಾ ಪಕ್ಷದ ಒಳ ಜಗಳದಿಂದಾಗಿ ರಾಜ್ಯದ ಆಡಳಿತ ವ್ಯವಸ್ಥೆ ಸಂಪೂರ್ಣ ಕುಸಿದು ಬಿದ್ದಿರುವ ಹಿನ್ನೆಲೆಯಲ್ಲಿ ರಾಜ್ಯಪಾಲರು ತಕ್ಷಣ ಮಧ್ಯೆ ಪ್ರವೇಶಿಸಿ ರಾಜ್ಯದ ಬಿಜೆಪಿ ಸರ್ಕಾರವನ್ನು ವಜಾಗೊಳಿಸಬೇಕು ಎಂದು ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯ ಒತ್ತಾಯಿಸಿದ್ದಾರೆ.

ಕೊರೊನಾ ನಿಯಂತ್ರಣದ ಮೇಲುಸ್ತುವಾರಿ ನೋಡಿಕೊಳ್ಳಬೇಕಾಗಿರುವ ರಾಜ್ಯದ ಸಚಿವರು ತಮ್ಮ ಕಚೇರಿಗೆ ಹೋಗದೆ ಬೆಂಗಳೂರಿನ ಪಕ್ಷದ ಕಚೇರಿಯಲ್ಲಿ ಬೀಡುಬಿಟ್ಟಿದ್ದಾರೆ. ತಮ್ಮ ಸ್ವಂತ ಕ್ಷೇತ್ರದಲ್ಲಿ ಜನರ ನೋವು-ಕಷ್ಟಗಳಿಗೆ ಸ್ಪಂದಿಸಬೇಕಾಗಿರುವ ಬಿಜೆಪಿ ಶಾಸಕರು ಬೆಂಗಳೂರಿನ ಪಕ್ಷದ ಕಚೇರಿಗೆ ಸುತ್ತು ಹಾಕುತ್ತಿದ್ದಾರೆ. ಒಟ್ಟಿನಲ್ಲಿ ರಾಜ್ಯದಲ್ಲಿ ಸರ್ಕಾರವೇ ಇಲ್ಲದ ಅರಾಜಕ ಪರಿಸ್ಥಿತಿ ನೆಲೆಯಾಗಿದೆ ಎಂದವರು ತರಾಟೆಗೆ (3ನೇ ಪುಟಕ್ಕೆ)

### ನಾಯಕತ್ವವೇ ಇಲ್ಲದ ಸರ್ಕಾರ ಉಪಯೋಗವಿಲ್ಲ: ವಿಸರ್ಜಿಸಿ



ಬೆಂಗಳೂರು, ಜೂ. 17 - ನಾಯಕತ್ವವೇ ಇಲ್ಲದ ಈ ಸರ್ಕಾರ ಇದ್ದೇನು ಉಪಯೋಗ. ಮೊದಲು ವಿಸರ್ಜಿಸಿ ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಆಗ್ರಹಿಸಿದ್ದಾರೆ.

ಈ ಸಂಬಂಧ ಸರಣಿ ಟ್ವೀಟ್ ಮಾಡಿರುವ ಅವರು, ಬಿಜೆಪಿಯಲ್ಲಿ ನಾಯಕತ್ವ ಇದೆಯೋ ಇಲ್ಲವೋ ಎಂಬುದರ ಬಗ್ಗೆ ಅನುಮಾನಗಳು ಮೂಡುತ್ತಿವೆ. ಸರ್ಕಾರದಲ್ಲಿ ನಾಯತ್ವ ಬಿಕ್ಕಟ್ಟು ಎದುರಾಗಿದೆಯಂತೆ. ನಾಯಕತ್ವ ಬದಲಿಸಲು ಸೂಕ್ತ ನಾಯಕನ ಹುಡುಕಾಟ ನಡೆದಿದೆಯಂತೆ, ಆದರೆ ಯಾವ ನಾಯಕರೂ ಸಿಗುತ್ತಿಲ್ಲವಂತೆ. ಬಿಜೆಪಿಯಲ್ಲಿ ಸಿಎಂ ಆಗಬಲ್ಲ ನಾಯಕನೇ ಇಲ್ಲವಂತೆ. ಇವೆಲ್ಲವೂ ಬಿಜೆಪಿಯೊಳಗಿನ ಚರ್ಚೆಗಳ ಮಾಧ್ಯಮಗಳ ವರದಿ ಎಂದಿದ್ದಾರೆ.

ಮನೆಯೊಳಗೆ ಮನೆಯೊಡೆಯನಿದ್ದಾನೋ ಇಲ್ಲವೋ, ಹೊಸ್ತಿಲಲ್ಲಿ ಹುಲ್ಲು ಹುಟ್ಟಿ, ಮನೆಯೊಳಗೆ ರಜ ತುಂಬಿ ಮನೆಯೊಳಗೆ ಮನೆಯೊಡೆಯನಿದ್ದಾನೋ, ಇಲ್ಲವೋ- ಕೂಡಲ ಸಂಗಮದೇವ ಎಂಬ ಬಸವಣ್ಣನವರ ವಚನವನ್ನು ಉಲ್ಲೇಖಿಸಿರುವ ಅವರು, ಕರ್ನಾಟಕ ಸರ್ಕಾರವನ್ನು ನಡೆಸುತ್ತಿರುವ ಬಿಜೆಪಿಗೆ ಸರಿಯಾಗಿ ಹೊಂದುವ ಬಸವಣ್ಣನವರ ವಚನವಿದು ಎಂದು ಹೇಳಿದ್ದಾರೆ.

ದೇಶದ ಅಭಿವೃದ್ಧಿಗಾಗಿ ಸಮರ್ಥ ನಾಯಕತ್ವ ಪ್ರತಿಪಾದಿಸುವ (3ನೇ ಪುಟಕ್ಕೆ)

## ಜಿಲ್ಲೆಯಲ್ಲಿ 153 ಪಾಸಿಟಿವ್ 11 ಸಾವು, 174 ಜನ ಗುಣ

ದಾವಣಗೆರೆ, ಜು.13- ಜಿಲ್ಲೆಯಲ್ಲಿ 153 ಕೊರೊನಾ ಪಾಸಿಟಿವ್ ಪ್ರಕರಣಗಳು ಗುರುವಾರ ವರದಿಯಾಗಿವೆ. 11 ಜನರು ಸೋಂಕಿನಿಂದ ಮೃತಪಟ್ಟಿದ್ದು, 174 ಜನರು ಗುಣಮುಖರಾಗಿ ರುವುದಾಗಿ ಜಿಲ್ಲಾಧಿಕಾರಿಗಳ ಪ್ರಕಟಣೆಯಲ್ಲಿ ತಿಳಿಸಲಾಗಿದೆ

ದಾವಣಗೆರೆಯಲ್ಲಿ 94, ಹರಿಹರ 4, ಜಗಳೂರು 5, ಚನ್ನಗಿರಿ 32, ಹೊನ್ನಾಳಿ 16 ಹಾಗೂ ಹೊರ ಜಿಲ್ಲೆಯ ಇಬ್ಬರಲ್ಲಿ (2ನೇ ಪುಟಕ್ಕೆ)

## ಬಾಬಾ ರಾಮದೇವ್ ವಿರುದ್ಧ ಎಫ್.ಐ.ಆರ್.

ರಾಯಪುರ, ಜೂ. 17- ಕೊರೊನಾ ಚಿಕಿತ್ಸೆಗೆ ನೀಡಲಾಗುವ ಔಷಧಿಯ ಕುರಿತು ತಪ್ಪು ಮಾಹಿತಿ



ನೀಡಿದ ಆರೋಪದ ಮೇಲೆ ಯೋಗ ಗುರು ಬಾಬಾ ರಾಮದೇವ್ ವಿರುದ್ಧ ಛತ್ತೀಸ್‌ಘಡದ ರಾಯಪುರದಲ್ಲಿ ಎಫ್.ಐ.ಆರ್. ದಾಖಲಿಸಲಾಗಿದೆ.

ಬುಧವಾರ ರಾತ್ರಿ ಬಾಬಾ ರಾಮದೇವ್ ವಿರುದ್ಧ ಛತ್ತೀಸ್‌ಘಡದ ಐ.ಎಂ.ಎ. ಘಟಕ ದೂರು ದಾಖಲಿಸಿದೆ ಎಂದು ರಾಯಪುರದ ಎಸ್‌ಎಸ್‌ಪಿ ಅಜಯ್ (3ನೇ ಪುಟಕ್ಕೆ)

## ನಗರದಲ್ಲಿ ಈ ಬಾರಿಯೂ ಆನ್‌ಲೈನ್‌ನಲ್ಲಿ ಯೋಗ

### ಜೂ.21ರಂದು ಮನೆಯಿಂದಲೇ ಯೋಗ ದಿನಾಚರಣೆಯಲ್ಲಿ ಭಾಗಿಯಾಗಲು ಡಿಸಿ ಕರೆ

ದಾವಣಗೆರೆ, ಜೂ. 17 - ಕೊರೊನಾ ಹಿನ್ನೆಲೆಯಲ್ಲಿ ಕಳೆದ ವರ್ಷದಂತೆ ಈ ಬಾರಿಯೂ ಆನ್‌ಲೈನ್ ಮೂಲಕ ಅಂತರರಾಷ್ಟ್ರೀಯ ಯೋಗ ದಿನಾಚರಣೆ ನೆರವೇರಿಸಲಾಗುವುದು.



ಜೂ. 21ರ ಬೆಳಿಗ್ಗೆ 6 ಗಂಟೆಗೆ ಯೋಗ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಬಹುದು ಎಂದು ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ತಿಳಿಸಿದ್ದಾರೆ.

ತಮ್ಮ ಕಚೇರಿಯಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡುತ್ತಿದ್ದ ಅವರು, ಅಂದು ಬೆಳಿಗ್ಗೆ 6ರಿಂದ 8 ಗಂಟೆಯವರೆಗೆ ವೈದ್ಯಶ್ರೀ ಚನ್ನಬಸವಣ್ಣನವರು ಯೋಗ ಪ್ರಾತ್ಯಕ್ಷಿಕೆ ಕಲಿಸಿ ಕೊಡಲಿದ್ದಾರೆ. ಇದನ್ನು ಫೇಸ್‌ಬುಕ್, ಯೂಟ್ಯೂಬ್, ಗೂಗಲ್ ಮೀಟ್, ಸ್ಥಳೀಯ ಟಿವಿ ಚಾನಲ್‌ಗಳಲ್ಲಿ ವೀಕ್ಷಿಸಬಹುದು ಎಂದು ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯ್ತಿ, ಆಯುಷ್ ಇಲಾಖೆ, ಜಿಲ್ಲಾ ವರದಿಗಾರರ ಕೂಟ ಹಾಗೂ ದಾವಣಗೆರೆ ಜಿಲ್ಲಾ ಯೋಗ ಒಕ್ಕೂಟಗಳ ಸಂಯುಕ್ತಾಶ್ರಯದಲ್ಲಿ ಯೋಗ ಕಾರ್ಯಕ್ರಮ ಆಯೋಜಿಸಲಾಗಿದೆ. ಇದರ ಅಂಗವಾಗಿ ಜಿಲ್ಲಾ (2ನೇ ಪುಟಕ್ಕೆ)

## 12ನೇ ತರಗತಿ ಮೌಲ್ಯ ಮಾಪನಕ್ಕೆ ಸುಪ್ರೀಂ ಅಸ್ತು

ನವದೆಹಲಿ, ಜೂ. 17 – ಸಿಬಿಎಸ್‌ಇ ಹಾಗೂ ಸಿ.ಐ.ಎಸ್.ಸಿ.ಇ. 12ನೇ ತರಗತಿ ಮಂಡಳಿ ಪರೀಕ್ಷೆ ರದ್ದುಗೊಳಿಸಿದ ನಂತರ ವಿದ್ಯಾರ್ಥಿಗಳ ಸಾಮರ್ಥ್ಯ ಮೌಲ್ಯಮಾಪನ ವಿಧಾನಕ್ಕೆ ಸುಪ್ರೀಂ ಕೋರ್ಟ್ ಒಪ್ಪಿಗೆ ನೀಡಿದ್ದು, ಈ ಬಗ್ಗೆ ಮರು ಪರಿಶೀಲಿಸುವುದಿಲ್ಲ ಎಂದು ಹೇಳಿದೆ.

ಸಿಬಿಎಸ್‌ಇ ಹತ್ತು, ಹನ್ನೊಂದು ಹಾಗೂ ಹನ್ನೆರಡನೇ ತರಗತಿಗಳ ಅಂಕಗಳನ್ನು ಕ್ರಮವಾಗಿ ಶೇ.30, 30 ಹಾಗೂ 40ರ ಪ್ರಮಾಣದಲ್ಲಿ ಪರಿಗಣಿಸಲು ಸೂತ್ರ ರೂಪಿಸಿದೆ. ಸಿ.ಐ.ಎಸ್.ಐ.ಸಿ.ಇ. ಕಳೆದ ಆರು ತರಗತಿಗಳ (2ನೇ ಪುಟಕ್ಕೆ)

## ಕೊರೊನಾ 3ನೇ ಅಲೆಯಲ್ಲಿ ಮಕ್ಕಳ ಮೇಲೆ ಪರಿಣಾಮವಿಲ್ಲ

ನವದೆಹಲಿ, ಜೂ 17 – ದೇಶದಲ್ಲಿ ಮೂರನೇ ಕೊರೊನಾ ಅಲೆ ಬಂದರೆ ಎರಡು ವರ್ಷಕ್ಕಿಂತ ಹೆಚ್ಚಿನ ವಯೋಮಾನದ ಮಕ್ಕಳ ಮೇಲೆ ಹೆಚ್ಚಿನ ಪರಿಣಾಮವಾಗುವ ಸಾಧ್ಯತೆ ಕಡಿಮೆ ಎಂದು ದೇಶದಲ್ಲಿ ನಡೆಸಲಾದ ಅಧ್ಯಯನವೊಂದು ತಿಳಿಸಿದೆ.

ಎರಡರಿಂದ 17 ವರ್ಷದ 7000 ಮಕ್ಕಳೂ ಸೇರಿದಂತೆ 4,509 ಜನರ ಅಧ್ಯಯನ ಮಾಡಿ ಮೆಡ್‌ರೆಕ್ಸಿವ್ ಎಂಬ ಸಮೀಕ್ಷೆ ಈ ವರದಿ ನೀಡಿದೆ. ಐದು ರಾಜ್ಯಗಳಲ್ಲಿ ಮಾರ್ಚ್ 15 ರಿಂದ ಜೂನ್ 10ರ ನಡುವೆ ಈ ಅಧ್ಯಯನ (2ನೇ ಪುಟಕ್ಕೆ)

## ಖಾದ್ಯ ತೈಲ ಆಮದು ಸುಂಕ ಇಳಿಕೆ

ನವದೆಹಲಿ ಜೂ. 17 – ಕೇಂದ್ರ ಸರ್ಕಾರ ಖಾದ್ಯ ತೈಲದ ಆಮದು ಸುಂಕವನ್ನು ಕಡಿಮೆ ಮಾಡಿದೆ. ಪ್ರತಿ ಟನ್‌ಗೆ 112 ಡಾಲರ್‌ಗಳವರೆಗೆ ಬೆಲೆ ಕಡಿಮೆ ಮಾಡಿರುವುದರಿಂದ ದೇಶೀಯ (2ನೇ ಪುಟಕ್ಕೆ)

### ಭದ್ರಾ ಜಲಾಶಯ

ಇಂದಿನ ಮಟ್ಟ : 144 ಅಡಿ
ಒಳ ಹರಿವು: 12557 ಕ್ಯೂಸೆಕ್ಸ್
ಹೊರ ಹರಿವು : 68 ಕ್ಯೂಸೆಕ್ಸ್
ಹಿಂದಿನ ವರ್ಷದ್ದು : 134.7 ಅಡಿ

## ಸ್ಫೋಟಕ ವಸ್ತುಗಳ ಅಕ್ರಮ ಸಾಗಾಟ

ದಾವಣಗೆರೆ, ಜೂ.17- ಅಕ್ರಮವಾಗಿ ಸಾಗಿಸಲಾಗುತ್ತಿದ್ದ 13 ಸಾವಿರ ರೂ. ಮೌಲ್ಯದ ಸ್ಫೋಟಕ ವಸ್ತುಗಳು ಮತ್ತು ಟ್ರ್ಯಾಕ್ಟರ್ ಅನ್ನು ಇಲ್ಲಿನ ಗ್ರಾಮಾಂತರ ಪೊಲೀಸರು ವಶಪಡಿಸಿಕೊಂಡು ಓರ್ವನನ್ನು ಬಂಧಿಸಿದ್ದಾರೆ.

ತಾಲ್ಲೂಕಿನ ಮೆಳ್ಳೇಕಟ್ಟೆ ಗ್ರಾಮದ ಶಿವಕುಮಾರ್ ಬಂಧಿತನು. ಕೃತ್ಯದಲ್ಲಿ ಭಾಗಿಯಾದ ಇತರೆ ಆರೋಪಿತರ ಪತ್ತೆಗಾಗಿ ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿಯವರನ್ನೊಳಗೊಂಡ ತಂಡವನ್ನು ರಚಿಸಲಾಗಿದೆ.

ಆಲೂರು ಗ್ರಾಮದ ಗಾಯತ್ರಿ ಅವರ ಕಲ್ಲುಕ್ವಾರಿ ಬಳಿ ರಸ್ತೆಯಲ್ಲಿ ಟ್ರ್ಯಾಕ್ಟರ್‌ನಲ್ಲಿ (2ನೇ ಪುಟಕ್ಕೆ)


## ನಿವೃತ್ತ ಇಂಜನಿಯರ್ ರುದ್ರಮುನಿ ಯಲಗಚ್ಚ್ ನಿಧನ



ದಾವಣಗೆರೆ ಎಂ.ಸಿ.ಸಿ. 'ಬಿ' ಬ್ಲಾಕ್ 10ನೇ ಮುಖ್ಯರಸ್ತೆ
4ನೇ ತಿರುವಿನ ಮನೆ ಸಂಖ್ಯೆ 3153ರ ವಾಸಿಗಳಾದ
ಲೋಕೋಪಯೋಗಿ ಇಲಾಖೆಯ
ನಿವೃತ್ತ ಕಾರ್ಯಪಾಲಕ ಅಭಿಯಂತರರಾದ
**ಶ್ರೀ ರುದ್ರಮುನಿ ಯಲಗಚ್ಚ್** ಅವರು
ದಿನಾಂಕ 16.06.2021ರ ಬುಧವಾರ ಬೆಳಿಗ್ಗೆ 9 ಗಂಟೆಗೆ
ಹೃದಯಾಘಾತದಿಂದ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ.
ಮೃತರಿಗೆ ಸುಮಾರು 76 ವರ್ಷ ವಯಸ್ಸಾಗಿತ್ತು. ಮೃತರ ಅಂತ್ಯಕ್ರಿಯೆಯನ್ನು
ಅದೇ ದಿನ ಸಂಜೆ ಶಾಮನೂರು ರುದ್ರಭೂಮಿಯಲ್ಲಿ ನೆರವೇರಿಸಲಾಯಿತು.

ದುಃಖತಪ್ತ ಕುಟುಂಬ ವರ್ಗ
ಧರ್ಮಪತ್ನಿ : ಶ್ರೀಮತಿ ಮೈತ್ರೇಯಿ ಆರ್.ವೈ.
ಪುತ್ರಿ-ಅಳಿಯ : ಶ್ರೀಮತಿ ರೇಖಾ ಆರ್.ಎಂ. ಮತ್ತು ರವಿ ಮುಂಡಾಸನವರ್
ಶ್ರೀಮತಿ ರಶ್ಮಿ ಎಸ್. ನಾಯ್ಕರ್ ಮತ್ತು ಸುಧೀರ್ ನಾಯ್ಕರ್
ಪುತ್ರ-ಸೊಸೆ : ಶ್ರೀಮತಿ ಅರ್ಪಿತಾ ಮತ್ತು ಹರ್ಷ ಯಲಗಚ್ಚ್
ಮತ್ತು ಬಂಧು-ಮಿತ್ರರು.



## ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ

॥ ಶ್ರೀ ಮರುಳಸಿದ್ದೇಶ್ವರ ಪ್ರಸನ್ನ ॥
ದಾವಣಗೆರೆ ಜಿಲ್ಲೆ, ಹೊನ್ನಾಳಿ ತಾಲ್ಲೂಕು ಕುಂದೂರು ಗ್ರಾಮದ ವಾಸಿ
**ಶರಣ ಪೊಲೀಸ್ ಗೌಡ್ರು ಶಿವಶಂಕರಪ್ಪ ಮತ್ತು ಸಹೋದರರು**
ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ 30.05.2021ನೇ ಭಾನುವಾರ ಮಧ್ಯಾಹ್ನ 1.15ಕ್ಕೆ ನಮ್ಮ ಪೂಜ್ಯ ತಂದೆಯವರಾದ



**ಶರಣ ಪೊಲೀಸ್ ಗೌಡ್ರು ಜಿ. ಹನುಮಂತಪ್ಪ**
ಅಧ್ಯಕ್ಷರು, ಜಿಲ್ಲಾ ಕೃಷಿಕ ಸಮಾಜ, ದಾವಣಗೆರೆ
ಇವರು ಲಿಂಗೈಕ್ಯರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
'ಕೈಲಾಸ ಶಿವಗಣಾರಾಧನೆ'ಯನ್ನು ದಿನಾಂಕ 19.06.2021ರ ಶನಿವಾರ
ಬೆಳಿಗ್ಗೆ 11 ಗಂಟೆಗೆ ಕುಂದೂರು ಗ್ರಾಮದ ಮೃತರ ಸ್ವಗೃಹದಲ್ಲಿ ಏರ್ಪಡಿಸಲಾಗಿದೆ.
ತಾವುಗಳು ಆಗಮಿಸಿ, ಲಿಂಗೈಕ್ಯರ ಆತ್ಮಕ್ಕೆ ಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು :
- ದಿ॥ ಪಿ.ಜಿ. ಚಂದ್ರಶೇಖರಪ್ಪ, ಶ್ರೀಮತಿ ಮೀನಾಕ್ಷಮ್ಮ ಮತ್ತು ಮಕ್ಕಳು
- ಶ್ರೀ ಪಿ.ಜಿ. ಶಿವಶಂಕರ್, ಶ್ರೀಮತಿ ಮೀನಾಕ್ಷಮ್ಮ ಮತ್ತು ಮಕ್ಕಳು
- ಶ್ರೀ ಪಿ.ಜಿ. ರುದ್ರೇಶ್, ಶ್ರೀಮತಿ ಶೋಭಾ ಮತ್ತು ಮಕ್ಕಳು
- ಶ್ರೀಮತಿ ಪಿ.ಜಿ. ಉಷಾ, ಶ್ರೀ ರಾಜಶೇಖರಪ್ಪ ಮತ್ತು ಮಕ್ಕಳು ಮೊಮ್ಮಕ್ಕಳು, ಆನಗೋಡು
- ಶ್ರೀಮತಿ ಪಿ.ಜಿ. ಲೀಲಾ, ದಿ॥ ಸುರೇಶ್ ಮತ್ತು ಮಕ್ಕಳು, ಮೊಮ್ಮಕ್ಕಳು, ಗಡಿಹಳ್ಳಿ.
- ಪೊಲೀಸ್ ಗೌಡ್ರು ವಂಶಸ್ಥರು, ಕುಂದೂರು. ಅಜ್ಜಪ್ಪ ವಂಶಸ್ಥರು, ಶಿರಮಗೊಂಡನಹಳ್ಳಿ ಹಾಗೂ ಬಂಧು-ಮಿತ್ರರು. ಕುಂದೂರು ಗ್ರಾಮಸ್ಥರು.

ಮೊ. : 7411404928, 9591819265, 8884618924

# ನಗರದಲ್ಲಿ ಈ ಬಾರಿಯೂ ಆನ್‌ಲೈನ್‌ನಲ್ಲಿ ಯೋಗ

(1ನೇ ಪುಟದಿಂದ) ವರದಿಗಾರರ ಕೂಟದ ಸದಸ್ಯರಿಗೆ ಆಯುಷ್ ಇಮ್ಯುನಿಟಿ ಕಿಟ್ ವಿತರಿಸಲಾಗುವುದು. ಜೂ. 18ರ ಶುಕ್ರವಾರ ಬೆಳಿಗ್ಗೆ ಕರ್ನಾಟಕ ಹಿಮೋಫಿಲಿಯಾ ಸೊಸೈಟಿಯಲ್ಲಿ ರಕ್ತದಾನ ಶಿಬಿರ ಆಯೋಜಿಸಲಾಗಿದೆ. ರಕ್ತದಾನ ಮಾಡಿದ 18 ವರ್ಷ ಮೇಲ್ಪಟ್ಟವರಿಗೆ ಕೊರೊನಾ ಲಸಿಕೆ ನೀಡಲಾಗುವುದು.

ಇದೇ ದಿನಾಂಕ 19ರ ಶನಿವಾರ ಟ್ರಾಫಿಕ್ ಪೊಲೀಸ್ ಠಾಣೆಯಲ್ಲಿ ಸಂಚಾರಿ ಪೊಲೀಸರಿಗೆ ಆರೋಗ್ಯ ರಕ್ಷ ಹಬೆ ಯಂತ್ರ ವಿತರಿಸಲಾಗುವುದು. ಅದೇ ದಿನ ಮಧ್ಯಾಹ್ನ 12ರಿಂದ 5 ಗಂಟೆಗೆ ಜಿಲ್ಲೆಯ 8 ವರ್ಷ ಮೇಲ್ಪಟ್ಟವರಿಗೆ ಆನ್‌ಲೈನ್ ಮೂಲಕ ಯೋಗ ಸ್ಪರ್ಧೆ ಆಯೋಜಿಸಲಾಗಿದೆ.

ಇದೇ ದಿನಾಂಕ 20ರ ಭಾನುವಾರ ಬೆಳಿಗ್ಗೆ 6 ಗಂಟೆಗೆ ನಗರದ ಜೆ.ಹೆಚ್. ಪಟೇಲ್ ವಸತಿ ನಿಲಯ, ತಾಜ್ ಪ್ಯಾಲೇಸ್ ಹಾಗೂ ತರಳಬಾಳು ವಸತಿ ನಿಲಯಗಳಲ್ಲಿರುವ ಕೋವಿಡ್ ಕೇರ್ ಸೆಂಟರ್‌ಗಳಲ್ಲಿ ಸೋಂಕಿತರಿಗೆ ಆರೋಗ್ಯ ಯೋಗ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಇದೇ ದಿನಾಂಕ 21ರ ಸೋಮವಾರ ಬೆಳಿಗ್ಗೆ 6ರಿಂದ 8ರವರೆಗೆ ಅಂತರರಾಷ್ಟ್ರೀಯ ಯೋಗ ದಿನಾಚರಣೆ ಕಾರ್ಯಕ್ರಮಗಳನ್ನು ಆನ್‌ಲೈನ್ ಮೂಲಕ ನಡೆಸಲಾಗುವುದು. ಜನರು ತಮಗೆ ಬರುವ ಯಾವುದೇ ಯೋಗಾಸನಗಳನ್ನು 1 ನಿಮಿಷದ ವಿಡಿಯೋ ಮಾಡಿ ಕಳಿಸಿದರೆ, ಆಯ್ದ ನೂರು ವಿಡಿಯೋಗಳನ್ನು ಸ್ಥಳೀಯ ಮಾಧ್ಯಮಗಳಲ್ಲಿ ಪ್ರಸಾರ ಮಾಡಲಾಗುವುದು.

ಆಯ್ದ 10 ವಿಡಿಯೋಗಳಿಗೆ ಸೂಕ್ತ ಬಹುಮಾನ ಇರಲಿದೆ. ವಿಡಿಯೋಗಳನ್ನು ಮೊ : 94800 51462, 98444 43119, 99163 31671, 90087 35273 ಇವುಗಳ ವಾಟ್ಸಾಪ್‌ಗೆ ಕಳಿಸಬಹುದು.

ಪತ್ರಿಕಾಗೋಷ್ಠಿಯಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿ.ಬಿ. ರಿಷ್ಯಂತ್, ಜಿಲ್ಲಾ ಆಯುಷ್ ಅಧಿಕಾರಿ ಡಾ. ಶಂಕರಗೌಡ, ಜಿಲ್ಲಾ ಯೋಗ ಒಕ್ಕೂಟದ ಪ್ರಧಾನ ಕಾರ್ಯದರ್ಶಿ ವಾಸುದೇವ್ ರಾಯ್ಕರ್ ಉಪಸ್ಥಿತರಿದ್ದರು.


**ಅಂತರರಾಷ್ಟ್ರೀಯ ಯೋಗ ದಿನಾಚರಣೆ ಅಂಗವಾಗಿ ಆಯುಷ್ ಇಮ್ಯುನಿಟಿ ಕಿಟ್ ವಿತರಣೆ, ರಕ್ತದಾನ ಶಿಬಿರ, ಹಬೆಯಂತ್ರ ವಿತರಣೆ, ಆನ್‌ಲೈನ್ ಯೋಗ ಸ್ಪರ್ಧೆ, ಕೊರೊನಾ ಸೋಂಕಿತರಿಗೆ ಆರೋಗ್ಯ ಯೋಗ**

### ಕೊರೊನಾ : ವಾರದಲ್ಲಿ ಒಳ್ಳೆಯ ವಾತಾವರಣದ ನಿರೀಕ್ಷೆ

ಕೊರೊನಾ ನಿಯಂತ್ರಣಕ್ಕೆ ವಿಧಿಸಲಾಗಿರುವ ನಿರ್ಬಂಧಗಳನ್ನು ಉಲ್ಲಂಘನೆ ಮಾಡದೇ, ಅವುಗಳನ್ನು ಪಾಲಿಸಿದರೆ ಸಂಕಷ್ಟದಿಂದ ಹೊರಬರಲು ಸಾಧ್ಯ ಎಂದಿರುವ ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ, ಇನ್ನೊಂದು ವಾರದಲ್ಲಿ ಜಿಲ್ಲೆಯಲ್ಲಿ ಒಳ್ಳೆಯ ವಾತಾವರಣ ಮೂಡಲಿದೆ ಎಂಬ ವಿಶ್ವಾಸ ಇದೆ ಎಂದಿದ್ದಾರೆ. ಕೊರೊನಾ ಸಾವುಗಳು ಸಂಭವಿಸಿದ ಮನೆಗಳ ಸುತ್ತಲು ಹೆಚ್ಚಿನ ಟೆಸ್ಟ್ ಮಾಡುವ ಮೂಲಕ ಸೋಂಕಿತರನ್ನು ಪತ್ತೆ ಮಾಡಲಾಗುತ್ತಿದೆ. ಪ್ರತಿ ದಿನ 4 ಸಾವಿರ ದಷ್ಟು ಮಾದರಿಗಳನ್ನು ಪಡೆಯಲಾಗುತ್ತಿದೆ. ಇದು ಸೋಂಕು ನಿಯಂತ್ರಣಕ್ಕೆ ನೆರವಾಗುತ್ತಿದೆ ಎಂದವರು ಹೇಳಿದರು.

# ರೈತರು ಬೆಳೆದ ಭತ್ತ, ರಾಗಿ ಇತರೆ ಧಾನ್ಯಗಳು ಎಂಎಸ್‌ಪಿ ಬೆಲೆಗಿಂತಲೂ ಕಡಿಮೆಗೆ ಮಾರಾಟ

### ನಗರದಲ್ಲಿ ರೈತರಿಂದ ಪ್ರತಿಭಟನೆ



ದಾವಣಗೆರೆ, ಜೂ.17- ರೈತರ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ, ಕರ್ನಾಟಕ ರಾಜ್ಯ ರೈತ ಸಂಘದ ಜಿಲ್ಲಾ ಘಟಕದಿಂದ ನಗರದಲ್ಲಿ ಇಂದು ಪ್ರತಿಭಟನೆ ನಡೆಸಲಾಯಿತು.

ತಹಸೀಲ್ದಾರ್ ಕಚೇರಿ ಮುಂದೆ ಸಂಘಟನೆಯ ರಾಜ್ಯ ಕಾರ್ಯದರ್ಶಿ ಬಲ್ಲೂರ್ ರವಿಕುಮಾರ್ ಮತ್ತು ರೈತ ಮುಖಂಡರ ನೇತೃತ್ವದಲ್ಲಿ ಜಮಾಯಿಸಿದ್ದ ಪದಾಧಿಕಾರಿಗಳು ಪ್ರತಿಭಟಿಸಿ, ಮುಖ್ಯಮಂತ್ರಿ ಯಡಿಯೂರಪ್ಪ ಅವರಿಗೆ ತಾಲ್ಲೂಕು ಆಡಳಿತದ ಮುಖಾಂತರ ಮನವಿ ಮಾಡಿದರು.

ಪ್ರಸ್ತುತ ಹೂವು-ಹಣ್ಣು, ತರಕಾರಿ ಬೆಳೆದಿರುವ ರೈತರಿಗೆ ಕೊರೊನಾ ಸಂಕಷ್ಟವನ್ನುಂಟು ಮಾಡಿದ್ದು, ಬೆಳೆದ ಬೆಳೆಗಳನ್ನು ಮಾರುಕಟ್ಟೆಗೆ ಸಾಗಿಸಲು ಸಾಧ್ಯವಾಗದೇ ಜಮೀನಿನಲ್ಲಿ ಕೊಳೆತು ನಷ್ಟವುಂಟಾಗಿದೆ. ಅಲ್ಲದೇ, ರೈತರು ಬೆಳೆದ ಭತ್ತ, ರಾಗಿ ಇತರೆ ಧಾನ್ಯಗಳಿಗೆ ಕೇಂದ್ರ ಸರ್ಕಾರದ ಎಂಎಸ್‌ಪಿ ಬೆಲೆಗಿಂತಲೂ ಕಡಿಮೆ ಮಾರಾಟವಾಗಿದ್ದು, ರೈತರು ಸಂಕಷ್ಟ ಅನುಭವಿಸುವಂತಾಗಿದೆ ಎಂದು ಪ್ರತಿಭಟನಾಕಾರರು ಬೇಸರ ವ್ಯಕ್ತಪಡಿಸಿದರು.

ಕಬ್ಬು ಬೆಳೆಗಾರರಿಗೆ ಸಕ್ಕರೆ ಕಂಪನಿ ಮಾಲೀಕರು ಕೂಡಲೇ ಬಾಕಿ ಹಣ ನೀಡಬೇಕು. ಪೆಟ್ರೋಲ್, ಡೀಸೆಲ್, ವಿದ್ಯುತ್ ಬೆಲೆ ಏರಿಕೆಯಿಂದ ಆಹಾರ ಧಾನ್ಯಗಳ ಬೆಲೆ ಗಗನಕ್ಕೆ ಏರಿದೆ. ತಕ್ಷಣವೇ ಕೇಂದ್ರ ಸರ್ಕಾರ ಈ ಬೆಲೆಗಳನ್ನು ಇಳಿಸಬೇಕು. ರಾಜ್ಯ ಮತ್ತು ಜಿಲ್ಲೆಯಲ್ಲಿ ಕೊರೊನಾ ತಪಾಸಣೆ ವೇಗ ಕಡಿಮೆಯಾಗಿದ್ದು, ಲಸಿಕೆಯ ವಿತರಣೆ ಗ್ರಾಮೀಣ ಭಾಗಕ್ಕೆ ಸಮರ್ಪಕವಾಗಿ ಹಂಚಿಕೆಯಾಗುತ್ತಿಲ್ಲ. ನಗರ ಪ್ರದೇಶಗಳಿಗೆ ಸೀಮಿತವಾದ ಲಸಿಕೆ ಹಂಚಿಕೆಯನ್ನು ಗ್ರಾಮೀಣ ಭಾಗಕ್ಕೂ ಒತ್ತು ನೀಡಿ ಹಂಚಿಕೆ ಮಾಡಬೇಕು ಎಂದು ಆಗ್ರಹಿಸಿದರು.

ತಮ್ಮ ಸ್ವಂತ ಖರ್ಚಿನಲ್ಲಿ ಶಾಸಕ ಡಾ. ಶಾಮನೂರು ಶಿವಶಂಕರಪ್ಪ ಅವರು ನಗರದ ಜನತೆಗೆ ಲಸಿಕೆ ಹಾಕಿಸಿದ ಮಾದರಿಯಂತೆ ರಾಜ್ಯದ ಸಂಸದರು, ಶಾಸಕರು ಹಾಗೂ ಚುನಾಯಿತ ಜನಪ್ರತಿನಿಧಿಗಳು ತಮ್ಮ ಕ್ಷೇತ್ರದ ಮತದಾರರಿಗೆ ಲಸಿಕೆ ಹಾಕಿಸಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಮುಖಂಡರಾದ ಆರ್.ಜಿ.ಬಸವರಾಜ್, ವೈ.ಸಿ. ಅಶೋಕ್, ಶೇಖರ್ ನಾಯ್ಕ ಸೇರಿದಂತೆ ಇತರರು ಪಾಲ್ಗೊಂಡಿದ್ದರು.

## ಖಾದ್ಯ ತೈಲ ಆಮದು ಸುಂಕ ಇಳಿಕೆ

(1ನೇ ಪುಟದಿಂದ) ಮಾರುಕಟ್ಟೆಯಲ್ಲಿ ಬೆಲೆಗಳು ಕಡಿಮೆಯಾಗಲಿವೆ ಎಂದು ಪರಿಣಿತರು ಹೇಳಿದ್ದಾರೆ. ಕೇಂದ್ರ ಪರೋಕ್ಷ ತೆರಿಗೆ ಹಾಗೂ ಸುಂಕದ ಮಂಡಳಿ ತೆರಿಗೆ ಕಡಿತದ ಬಗ್ಗೆ ಅಧಿಸೂಚನೆ ಪ್ರಕಟಿಸಿದೆ. ಈ ಕ್ರಮದಿಂದಾಗಿ ಸೋಯಾಬೀನ್ ಕಚ್ಚಾ ತೈಲದ ಆಮದು ಬೆಲೆ ಪ್ರತಿ ಟನ್‌ಗೆ 37 ಡಾಲರ್‌ಗಳಷ್ಟು ಕಡಿಮೆಯಾಗಲಿದೆ. ಈ ಇಳಿಕೆ ಜೂನ್ 17ರಿಂದ ಜಾರಿಗೆ ಬರಲಿದೆ. ಕಳೆದ ವರ್ಷದಲ್ಲಿ ದೇಶೀಯ ಖಾದ್ಯ ತೈಲದ ಬೆಲೆ ಗಣನೀಯವಾಗಿ ಹೆಚ್ಚಾಗಿದೆ.

## ಹರಿಹರ ತಾ.ನಲ್ಲಿ 604 ಜನರಿಗೆ ಟೆಸ್ಟ್

ಮಲೇಬೆನ್ನೂರು, ಜೂ.17 - ಗುರುವಾರವೂ ಹರಿಹರ ತಾಲ್ಲೂಕಿನಲ್ಲಿ ಕೊರೊನಾ ಸೋಂಕು ಮತ್ತಷ್ಟು ಇಳಿಕೆ ಕಂಡಿದ್ದು, ಬೆಳಗಿನ ವರದಿ ಪ್ರಕಾರ 3 ಜನರಿಗೆ ಮಾತ್ರ ಸೋಂಕು ದೃಢಪಟ್ಟಿದೆ.

ಗುತ್ತೂರಿನಲ್ಲಿ 297, ವಾಸನದಲ್ಲಿ 106, ಹರಿಹರದಲ್ಲಿ 30, ಮಲೇಬೆನ್ನೂರಿನಲ್ಲಿ 55 ಸೇರಿ ಒಟ್ಟು 603 ಜನರಿಗೆ ಕೊರೊನಾ ಟೆಸ್ಟ್ ಮಾಡಲಾಗಿದೆ. ಈ ಪೈಕಿ 88 ರ‍್ಯಾಪಿಡ್ ಟೆಸ್ಟ್‌ನಲ್ಲಿ 8 ಜನರಿಗೆ ಪಾಸಿಟಿವ್ ಬಂದಿದೆ. ಮಲೇಬೆನ್ನೂರಿನಲ್ಲಿ ಒಬ್ಬರಿಗೆ ಮತ್ತು ಹರಿಹರ ನಗರದಲ್ಲಿ 7 ಜನರಿಗೆ ಸೋಂಕು ಕಾಣಿಸಿಕೊಂಡಿದೆ.


ಜೈ ಶ್ರೀಮನ್ನಾರಾಯಣ
ವಿಕಾಸ ತರಂಗಿಣಿ, ದಾವಣಗೆರೆ
ಸ್ಫೂರ್ತಿ ಸೇವಾ ಟ್ರಸ್ಟ್
ಪ್ರಸಾದ ದಾಸೋಹ
ಇಂದಿನ ಪ್ರಸಾದ ವಿತರಕರು
ಶ್ರೀಮತಿ ಮುರುಗೇಶ್ವರಿ ಮತ್ತು ಶ್ರೀ ಜೆ.ವೀರಪ್ಪ ಇವರ 55ನೇ ವಿವಾಹ ವಾರ್ಷಿಕೋತ್ಸವದ ಪ್ರಯುಕ್ತ ಕುಟುಂಬ ವರ್ಗದವರ ಸೇವಾರ್ಥ
ಸ್ಥಳ : ಸಿ.ಜಿ. ಆಸ್ಪತ್ರೆ ಮುಂಭಾಗ, 12 ಗಂಟೆಗೆ ಮತ್ತು ಹೆರಿಗೆ ಆಸ್ಪತ್ರೆ ಮುಂಭಾಗ, 12.30ಕ್ಕೆ

ಅನ್ನವೇ ದೇವರು
ಕರುಣಾ ಜೀವ ಕಲ್ಯಾಣ ಟ್ರಸ್ಟ್
ಇಂದಿನ ಅನ್ನ ದಾಸೋಹ ದಾಸೋಹಿಗಳು
ಮಲ್ಲಿಕಾರ್ಜುನ್.ಹೆಚ್.
ನಿವೃತ್ತ ಕಾರ್ಯಪಾಲಕ ಇಂಜಿನಿಯರ್,ವಿನಾಯಕ ಬಡಾವಣೆ,ದಾವಣಗೆರೆ.
ಧನ ಸಹಾಯ ಮಾಡುವವರು ಸಂಪರ್ಕಿಸಿ
91104 55199

ಕಮರ್ಷಿಯಲ್ ಸೈಟ್ ಮಾರಾಟಕ್ಕಿದೆ
ಹೊಂಡದ ಸರ್ಕಲ್‌ನಿಂದ ಮೈಲಾರಲಿಂಗೇಶ್ವರ ದೇವಸ್ಥಾನ ಮಧ್ಯ ವಾಲ್ಮೀಕಿ ಸರ್ಕಲ್‌ನಲ್ಲಿ ಕಾರ್ನರ್ ಪೂರ್ವಕ್ಕೆ ದೂಡಾ ಫೈನಲ್ ಅಪ್ರೂವಲ್ ಸೈಟ್ ಮಾರಾಟಕ್ಕೆ ಇದೆ. ಸಂಪರ್ಕಿಸಿ
89517 16682

ಬಾರ್ & ರೆಸ್ಟೋರೆಂಟ್ ಲೈಸೆನ್ಸ್ ರಿನೀವಲ್‌ಗೆ ಬೇಕಾಗುವ ಅಫಿಡವಿಟ್‌ಗಳನ್ನು ಮಾಡಿಕೊಡಲಾಗುವುದು.
(E-Stamp + Notary + Typing)
98449 69738

ತಕ್ಷಣ ಬೇಕಾಗಿದ್ದಾರೆ
ಕೋರಿಯರ್ ಆಫೀಸ್‌ನಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. Two wheeler ಬೈಕ್ ಇರಬೇಕು. ಪೆಟ್ರೋಲ್ ಭತ್ಯೆ ಕೊಡಲಾಗುವುದು.
ಬೆಳಿಗ್ಗೆ 8 ರಿಂದ ಸಂಜೆ 6 ರವರೆಗೆ
9480795548
87468 00714

ಸೈಟ್ ಮಾರಾಟಕ್ಕಿದೆ
ದಾವಣಗೆರೆ ಕೆ.ಹೆಚ್.ಬಿ ಯಲ್ಲಿ ಪೂರ್ವ ದಿಕ್ಕಿನ 30x50 ಸೈಟು ಮಹಾನಗರ ಪಾಲಿಕೆಯಲ್ಲಿ ಎಂಟ್ರಿಯಾಗಿರುತ್ತದೆ.
94488 74011

ಮಹಿಳೆ ಬೇಕಾಗಿದ್ದಾರೆ
ಎಂ.ಸಿ.ಸಿ. 'ಬಿ' ಬ್ಲಾಕ್‌ನಲ್ಲಿರುವ ಮನೆಯಲ್ಲಿ ಅಡುಗೆ ಮಾಡಲು ಲಿಂಗಾಯಿತ ಸಮಾಜದ ಮಹಿಳೆ ಬೇಕಾಗಿದ್ದಾರೆ. ಸಂಪರ್ಕಿಸಿ :
ಮೊ. 78929 94856

ಸಸಿಗಳು ದೊರೆಯುತ್ತವೆ
ನಮ್ಮಲ್ಲಿ ಉತ್ತಮ ತಳಿಯ ತೆಂಗು, ಅಡಿಕೆ, ಮಾವು, ಸಪೋಟಾ, ಬೆಟ್ಟದ ನೆಲ್ಲಿ, ತೇಗ, ಸಿಲ್ವರ್, ಹೆಬ್ಬೇವು, ಶ್ರೀಗಂಧ, ಗುಲಾಬಿ ಹಾಗೂ ಇತರೆ ಸಸಿಗಳು ದೊರೆಯುತ್ತವೆ. ಹಾಗೂ ಸಾವಯವ ಗೊಬ್ಬರ ದೊರೆಯುತ್ತದೆ.
ಸುಬ್ರಮಣಿ ಆಗ್ರೋಟೆಕ್
ಶಕ್ತಿನಗರ, ನಿಟುವಳ್ಳಿ, ದಾವಣಗೆರೆ.
94484 39639, 63665 96479

ಬೇಕಾಗಿದ್ದಾರೆ
ಅಡುಗೆ ಕೆಲಸಕ್ಕೆ ಲಿಂಗಾಯತ ಮಹಿಳೆ ಬೇಕಾಗಿದ್ದಾರೆ. ತರಳಬಾಳು ಬಡಾವಣೆ, ವಿದ್ಯಾನಗರ ಸುತ್ತಮುತ್ತಲಿನವರು ಸಂಪರ್ಕಿಸಿ
94481 55555

WHOLESALE PRICE
Oximeter (2 years Replacement warranty), Organic Sanitizer, Spirometer, Vaporizer, Thermometer, Variety N95 Original Mask, Face shield, Face guard, Sodium, All Covid-19 Related Products available in wholesale price.
Contact : 80882 10419

ಗಿಡಗಳು ದೊರೆಯುತ್ತವೆ
ನಮ್ಮಲ್ಲಿ ಕ್ರಾಸಿಂಗ್ ಮಾಡಿದ ತ್ಯಾಗದ ಗಿಡಗಳು, ತೆಂಗು, ಶ್ರೀಗಂಧ, ರಕ್ತ ಚಂದನ, ಮಾವು, ಸಪೋಟ, ಜಂಬು ನೇರಳೆ, ಪೇರಲ ಗಿಡಗಳು ದೊರೆಯುತ್ತವೆ. ಡೋರ್ ಡೆಲಿವರಿ ಕೊಡಲಾಗುವುದು.
98458 01330

ಮನೆ ಲೀಸ್‌ಗೆ ಇದೆ
ಸಿಂಗಲ್ ಬೆಡ್ ರೂಂ ಮೊದಲನೇ ಮಹಡಿ. 3ನೇ ಮೇನ್, 3ನೇ ಕ್ರಾಸ್, ಎಸ್.ಎಸ್. ಲೇಔಟ್ 'ಬಿ' ಬ್ಲಾಕ್
ಮೊ: 98440 11958

ವಾಹನ ಚಾಲಕರು ಬೇಕಾಗಿದ್ದಾರೆ
ಸಂಪರ್ಕಿಸಿ :
ಮೊ. : 94492 66133
94488 39229

ಮನೆ ಬಾಡಿಗೆಗೆ ಇದೆ
ಎಸ್.ಎಸ್. ಲೇಔಟ್ 'ಎ' ಬ್ಲಾಕ್, 1ನೇ ಮುಖ್ಯ ರಸ್ತೆ, 6ನೇ ಕ್ರಾಸ್‌ನಲ್ಲಿರುವ "ರೇಣುಕ ಸದನ" ಮನೆಯ ಮೊದಲನೇ ಮಹಡಿಯಲ್ಲಿ 2BHK ಮನೆ ಬಾಡಿಗೆಗೆ ಇದೆ. ಸಂಪರ್ಕಿಸಿ
94489 61452, 86188 36903
93411 94734

ಮನೆ ಬಾಡಿಗೆಗೆ ಇದೆ
ಮಹಾಲಸ ನಿಲಯ 4ನೇ ಮೇನ್, 4ನೇ ಕ್ರಾಸ್, ವಿನೋಬನಗರ
Contact: 94488 73541
ಸುಬ್ಬರಾವ್ ವೆರ್ಣೇಕರ್
72598 76703

ಕಮರ್ಷಿಯಲ್ ಸೈಟು ಮಾರಾಟಕ್ಕಿದೆ
ನಗರದ B.I.E.T. ರಸ್ತೆಗೆ, ಹೇಮಾವತಿ ಹಾಸ್ಟೆಲ್ ಎದುರು ಒಟ್ಟು 3200 ಅಡಿ ಇರುವ ಕಾರ್ನರ್ ಸೈಟು ಮಾರಾಟಕ್ಕಿದೆ. ಆಸಕ್ತರು ನೇರವಾಗಿ ಸಂಪರ್ಕಿಸಿ.
Mohan Real Estate Agency
9742434049

ಬಿಲ್ಡಿಂಗ್ ಮಾರಾಟಕ್ಕಿದೆ
ವೈಷ್ಣವಿ ನಿಲಯ, 3ನೇ ಬಸ್ ಸ್ಟಾಪ್, 10ನೇ ಕ್ರಾಸ್, ಟಿ.ಬಿ. ಬಡಾವಣೆ, ವಿದ್ಯಾನಗರ, ದಾವಣಗೆರೆ. 30x40 ಅಳತೆಯ (33 ಚದರ)
3 ಮಹಡಿ ಮನೆ ಮಾರಾಟಕ್ಕಿದೆ.
95387 56409, 93410 21209


ಆಯುಷ್ ವಯೋವೃದ್ಧರ ಆರೈಕೆ ಕೇಂದ್ರ
ನಮ್ಮಲ್ಲಿ ವೃದ್ಧರು, ಅಂಗವಿಕಲರು, ಪಾರ್ಶ್ವವಾಯು ಪೀಡಿತರು ಹಾಗೂ ರೋಗಿಗಳ ಆರೈಕೆ ಮಾಡಲಾಗುವುದು. ಊಟ ಮತ್ತು ವಸತಿ ವ್ಯವಸ್ಥೆ ಇರುತ್ತದೆ. ವಿದ್ಯಾನಗರ, ದಾವಣಗೆರೆ.
97315 11795

ನೀವು ರಾಜಕೀಯದಲ್ಲಿ ಉನ್ನತ ಯಶಸ್ಸು ಕಾಣುವ ಹಂಬಲದಲ್ಲಿದ್ದೀರಾ? ಹಾಗಾದರೆ ನಮ್ಮನ್ನು ಸಂಪರ್ಕಿಸಿ.
ಸಾಂದೀಪನಿ ತಂತ್ರ ಸಾಧಕರು
76767 50280



ಕೈಲಾಸ ಸಮಾರಾಧನೆ
॥ ಶ್ರೀ ಮಂಜುನಾಥಸ್ವಾಮಿ ಪ್ರಸನ್ನ ॥
ದಾವಣಗೆರೆ ಗಾಂಧಿನಗರ ವಾಸಿ
ಶ್ರೀ ಯರಗುಂಟಿ ಎಂ. ಭೀಮಪ್ಪ ಮತ್ತು ಮಕ್ಕಳು ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ 03-06-2021 ನೇ ಗುರುವಾರ ಬೆಳಿಗ್ಗೆ 10-30 ಕ್ಕೆ ನನ್ನ ಧರ್ಮಪತ್ನಿಯಾದ
ಶ್ರೀಮತಿ ಯರಗುಂಟಿ ಹಾಲಮ್ಮ
ಇವರು ದೈವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ 'ಕೈಲಾಸ ಸಮಾರಾಧನೆ'ಯನ್ನು ದಿನಾಂಕ 18.06.2021 ನೇ ಶುಕ್ರವಾರ ಮಧ್ಯಾಹ್ನ 12-00 ಕ ದಾವಣಗೆರೆಯ #1161/1, 5ನೇ ಕ್ರಾಸ್, ಗಾಂಧಿನಗರ, ದಾವಣಗೆರೆ ಇಲ್ಲಿರುವ ಮೃತರ ಸ್ವಗೃಹದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಸಕಾಲಕ್ಕೆ ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.
ಇಂತಿ ದುಃಖತಪ್ತರು :
ಶ್ರೀ ಯರಗುಂಟಿ ಎಂ. ಭೀಮಪ್ಪ ಮತ್ತು ಮಕ್ಕಳು, ಸೊಸೆಯಂದಿರು, ಮೊಮ್ಮಕ್ಕಳು, ಯರಗುಂಟಿ ವಂಶಸ್ಥರು ಹಾಗೂ ಕುಟುಂಬದವರು ಮತ್ತು ಬಂಧು-ಮಿತ್ರರು.


# ಮಲೇಬೆನ್ನೂರು ಪುರಸಭೆ ಚುನಾವಣೆ ಜು. 9ಕ್ಕೆ ಅಂತಿಮ ಮತದಾರರ ಪಟ್ಟಿ ಪ್ರಕಟ



ಮಲೇಬೆನ್ನೂರು, ಜೂ.17- ಇಲ್ಲಿನ ಪುರಸಭೆಯ ಕೌನ್ಸಿಲ್ ಸಭಾಂಗಣದಲ್ಲಿ ಪುರಸಭೆ ಚುನಾವಣೆಗೆ ಮತದಾರರ ಪಟ್ಟಿ ತಯಾರಿಸಿ ಕೊಡುವ ಬಗ್ಗೆ ಮೊನ್ನೆ ತಹಶೀಲ್ದಾರ್ ಕೆ.ಬಿ. ರಾಮಚಂದ್ರಪ್ಪ ಅವರು ಬಿಎಲ್‌ಓಗಳ ಸಭೆ ನಡೆಸಿದರು.

ವಾರ್ಡ್‌ವಾರು ಮತದಾರರ ಪಟ್ಟಿ, ಗಣಕೀಕರಣ ಹಾಗೂ ಮುದ್ರಣದ ಬಗ್ಗೆ ವಿವರವಾಗಿ ತಿಳಿಸಿದ ತಹಶೀಲ್ದಾರ್ ಅವರು, ಜೂ.17 ರಿಂದ 19 ರ ಒಳಗಾಗಿ ವಾರ್ಡ್‌ಗಳ ವಿಂಗಡಣೆ ಅಧಿಸೂಚನೆಯಂತೆ ವಾರ್ಡ್ ವ್ಯಾಪ್ತಿಯಲ್ಲಿ ಬರುವ ಮತದಾರರನ್ನು ಗುರ್ತಿಸಬೇಕು.

ಜೂನ್ 21 ರಿಂದ 23 ರ ಒಳಗಾಗಿ ಮತದಾರರ ಪಟ್ಟಿಯಲ್ಲಿ ಮತದಾರರನ್ನು ಗುರ್ತಿಸಿದ ನಂತರ ಫ್ರಮ್ ಟು ಮ್ಯಾಟ್ರಿಕ್ಸ್ ತಯಾರಿಸಿ, ಮುದ್ರಕರಿಗೆ ನೀಡಬೇಕು. ಜೂ.24 ರಿಂದ 25ರ ಒಳಗಾಗಿ ಮುದ್ರಕರಿಂದ ಪ್ರಥಮ ಚೆಕ್‌ಲಿಸ್ಟ್ ಪಡೆದುಕೊಂಡು ವಾರ್ಡ್‌ವಾರು ಮತ್ತೊಮ್ಮೆ ಪರಿಶೀಲಿಸಿ ಆಗಬೇಕಾಗಿರುವ ಬದಲಾವಣೆಯನ್ನು ಮುದ್ರಕರಿಂದ ಮಾಡಿಸುವುದು.

ಜೂ.28ಕ್ಕೆ ಕರಡು ಮತದಾರರ ಪಟ್ಟಿಯನ್ನು ಪ್ರಕಟಿಸಬೇಕು. ಜುಲೈ 1 ಕ್ಕೆ ಆಕ್ಷೇಪಣೆಗಳನ್ನು ಸಲ್ಲಿಸಲು ಕೊನೆಯ ದಿನ. ಆಕ್ಷೇಪಣೆಗಳು ಇದ್ದಲ್ಲಿ ಇತ್ಯರ್ಥ ಪಡಿಸಲು ಜು. 2 ರಿಂದ 5 ರವರೆಗೆ ಅವಕಾಶ ಇರುತ್ತದೆ. ಜುಲೈ 9 ರಂದು ಅಂತಿಮ ಮತದಾರರ ಪಟ್ಟಿ ಪ್ರಕಟಿಸಲಾಗುತ್ತದೆ. ಚುನಾವಣೆ ವಿಷಯ ನಿರ್ವಾಹಕರಾದ ಸೋಮಶೇಖರ್, ಉಮೇಶ್, ಗುರುಪ್ರಸಾದ್, ನವೀನ್, ಕಂದಾಯ ನಿರೀಕ್ಷಕ ಆನಂದ್, ಗ್ರಾಮಲೆಕ್ಕಾಧಿಕಾರಿ ಕೊಟ್ರೇಶ್ ಸಭೆಯಲ್ಲಿದ್ದರು.

## 12ನೇ ತರಗತಿ ಮೌಲ್ಯ ಮಾಪನಕ್ಕೆ ಸುಪ್ರೀಂ ಅಸ್ತು

(1ನೇ ಪುಟದಿಂದ) ಅಂಕಗಳನ್ನು ಪರಿಗಣಿಸುವುದಾಗಿ ತಿಳಿಸಿದೆ. ಜುಲೈ 31ರಂದು ಫಲಿತಾಂಶ ಪ್ರಕಟಿಸುವುದಾಗಿ ಎರಡೂ ಮಂಡಳಿಗಳು ಹೇಳಿವೆ.

ನ್ಯಾಯಮೂರ್ತಿಗಳಾದ ಎ.ಎಂ. ಖಾನ್ವಿಲ್ಕರ್ ಹಾಗೂ ದಿನೇಶ್ ಮಹೇಶ್ವರಿ ಅವರನ್ನು ಒಳಗೊಂಡ ಪೀಠದ ಎದುರು ಪರೀಕ್ಷಾ ಮೌಲ್ಯಮಾಪನದ ಸೂತ್ರವನ್ನು ಸಲ್ಲಿಸಲಾಗಿದೆ. 12ನೇ ತರಗತಿಗೆ ಸಂಬಂಧಿಸಿದಂತೆ ಪ್ರಾಯೋಗಿಕ ಹಾಗೂ ಆಂತರಿಕ ಮೌಲ್ಯಮಾಪನ ಅಂಕಗಳನ್ನು ಅಂತಿಮ ಫಲಿತಾಂಶಕ್ಕೆ ಪರಿಗಣಿಸಲಾಗುವುದು.

ಕಾನೂನು ಪರೀಕ್ಷಾ ಪ್ರವೇಶ ಸೇರಿದಂತೆ ಹಲವಾರು ಪರೀಕ್ಷೆಗಳನ್ನು ನೇರವಾಗಿ ನಡೆಸಲಾಗುತ್ತಿದೆ. ಹೀಗಿರುವಾಗ ಹನ್ನೆರಡನೇ ತರಗತಿ ಪರೀಕ್ಷೆ ರದ್ದುಗೊಳಿಸಬೇಕು ಎಂದು ಹಿರಿಯ ವಕೀಲ ವಿಕಾಸ್ ಸಿಂಗ್ ಎಂಬುವವರು ದಾಖಲಿಸಿದ ಅರ್ಜಿಯನ್ನು ನ್ಯಾಯಾಲಯ ತಳ್ಳಿ ಹಾಕಿದೆ.

ಇಷ್ಟಾದರೂ, ಅಂಕಗಳನ್ನು ಉತ್ತಮ ಪಡಿಸಿಕೊಳ್ಳಬೇಕೆಂದು ಬಯಸುವವರು ಪರೀಕ್ಷೆಗೆ ಹಾಜರಾಗಲು ಅವಕಾಶ ಕಲ್ಪಿಸಲಾಗುವುದು. ಹೀಗಾಗಿ ಪರೀಕ್ಷೆಗೆ ಹಾಜರಾಗಲು ಬಯಸುವವರಿಗೆ ಯಾವುದೇ ವ್ಯತ್ಯಾಸವಾಗದು ಎಂದು ನ್ಯಾಯಾಲಯ ಹೇಳಿದೆ. ಆದರೆ, ಈ ಮೌಲ್ಯಮಾಪನ ವ್ಯವಸ್ಥೆಯಲ್ಲಿ ವಿದ್ಯಾರ್ಥಿಗಳು ನೀಡುವ ದೂರುಗಳನ್ನು ಬಗೆಹರಿಸಲು ವ್ಯವಸ್ಥೆ ಇರಬೇಕು. ಪರೀಕ್ಷೆ ಬಯಸುವ ವಿದ್ಯಾರ್ಥಿಗಳಿಗೆ ವೇಳಾಪಟ್ಟಿಯನ್ನು ಪ್ರಕಟಿಸಬೇಕು ಎಂದು ನ್ಯಾಯಾಲಯ ಹೇಳಿದೆ.

ಎರಡೂ ಪರೀಕ್ಷಾ ಮಂಡಳಿಗಳು ನ್ಯಾಯಾಲಯದ ಸಲಹೆಗೆ ಸಮ್ಮತಿಸಿವೆ. ಮುಂದಿನ ವಿಚಾರಣೆ ಸೋಮವಾರ ನಡೆಯಲಿದೆ.

## ಇಲಾಖೆಗಳಲ್ಲಿ ವಿಜಯೇಂದ್ರ ಹಸ್ತಕ್ಷೇಪ

(1ನೇ ಪುಟದಿಂದ) ಭಾರೀ ಭ್ರಷ್ಟಾಚಾರ ಮಾಡುತ್ತಿದ್ದಾರೆ. ಇದನ್ನು ಮುಖ್ಯಮಂತ್ರಿಯವರಿಗೆ ಕೇಳಿದರೆ, ವರಿಷ್ಠರಿಗೆ ನೀಡಬೇಕು ಎನ್ನುತ್ತಾರೆ. ಇತ್ತೀಚೆಗೆ ವಿಜಯೇಂದ್ರ ನೀರಾವರಿ ಇಲಾಖೆಯಲ್ಲಿ 20 ಸಾವಿರ ಕೋಟಿ ರೂಪಾಯಿ ಮೌಲ್ಯದ ಟೆಂಡರ್ ಅನ್ನು ಕಾನೂನು ಬಾಹಿರವಾಗಿ ನೀಡಿ, ಶೇಕಡ 10 ರಷ್ಟು ಭ್ರಷ್ಟಾಚಾರ ನಡೆಸಿದ್ದಾರೆ. ಗುತ್ತಿಗೆ ನೀಡುವುದಕ್ಕೂ ಮುನ್ನ ಸಂಬಂಧಪಟ್ಟ ನೀರಾವರಿ ನಿಗಮ ತಮ್ಮ ಇಲಾಖೆಯ ಅನುಮತಿಯನ್ನೂ ಪಡೆದಿಲ್ಲ, ಇದು ಒಂದು ಉದಾಹರಣೆ ಅಷ್ಟೆ. ದಿನವೂ ಇಂತಹ ಪ್ರಕರಣಗಳು ನಡೆಯುತ್ತಲೇ ಇರುತ್ತವೆ. ಇಂತಹ ಸರ್ಕಾರ ನಮಗೆ ಬೇಕೆ? ಎಂದು ಪ್ರಶ್ನಿಸಿದರು.

ಮುಂದೆ ಯಡಿಯೂರಪ್ಪನವರನ್ನು ಬದಲಾಯಿಸಿ, ಲಿಂಗಾಯತ ಸಮುದಾಯಕ್ಕೆ ಸೇರಿದ ಪಂಚಮಸಾಲಿಯ ಮುರುಗೇಶ್ ನಿರಾಣಿ ಅವರನ್ನೋ, ಬಸನಗೌಡ ಪಾಟೀಲ್ ಯತ್ನಾಳ್ ಇಲ್ಲವೇ ಅರವಿಂದ್ ಬೆಲ್ಲದ್ ಅವರನ್ನೋ ಮುಖ್ಯಮಂತ್ರಿಯನ್ನಾಗಿ ಮಾಡಿ. ಇದಕ್ಕೆ ನಮ್ಮ ಅಭ್ಯಂತರವಿಲ್ಲ. ಮೊದಲು ಕುಟುಂಬ ರಕ್ಕಸ ರಾಜಕಾರಣದಿಂದ ಸರ್ಕಾರವನ್ನು ಬಿಡಿಸಿ, ಸಾಮಾನ್ಯ ಜ್ಞಾನ ಇರುವವರು ಮುಖ್ಯಮಂತ್ರಿಯಾಗಲಿ. ಅವರಿಗೆ ವಯೋಮಿತಿಯಿಂದ ಆಡಳಿತ ನಡೆಸಲು ಸಾಧ್ಯವಾಗುತ್ತಿಲ್ಲ. ಅವರ ಬಲ ಕುಗ್ಗಿದೆ. ಇದನ್ನು ಅವರ ಕುಟುಂಬದವರು ದುರುಪಯೋಗ ಪಡಿಸಿಕೊಳ್ಳುತ್ತಿದ್ದಾರೆ. ಮೊದಲು ಯಡಿಯೂರಪ್ಪನವರನ್ನು ಬದಲಾವಣೆ ಮಾಡಿ ಎಂದು ಕೇಳಿದ್ದೇನೆ.

ವಿಶ್ವನಾಥ್ ಹೇಳಿಕೆಗೆ ಕೆಂಡಾಮಂಡಲರಾಗಿರುವ ಮುಖ್ಯಮಂತ್ರಿಯವರ ರಾಜಕೀಯ ಕಾರ್ಯದರ್ಶಿ ರೇಣುಕಾಚಾರ್ಯ, ಬಿಡಿಎ ಅಧ್ಯಕ್ಷ ವಿಶ್ವನಾಥ್, ಶಾಸಕ ಹರತಾಳ ಹಾಲಪ್ಪ ಅವರು ಮಾನಸಿಕ ಅಸ್ತಿತ್ವ ಕಳೆದುಕೊಂಡಿದ್ದಾರೆ. ಅವರಿಗೆ ಮೊದಲು ಚಿಕಿತ್ಸೆ ಕೊಡಿಸಬೇಕು ಎಂದು ಸುದ್ದಿಗಾರರಿಗೆ ತಿಳಿಸಿದ್ದಾರೆ.

ವಿಶ್ವನಾಥ್ ಅವರಿಗೆ ವಯಸ್ಸಾಗಿಲ್ಲವೇ? ಎಂದು ಪ್ರಶ್ನಿಸಿದ ಅವರು, ತಿಂದ ಮನೆಗೆ ಮದ್ದು ಇಡುವ ವ್ಯಕ್ತಿ. ಇವರ ಮನಸ್ಥಿತಿ ಸರಿಯಿಲ್ಲ. ಇವರು ಯಾವುದೇ ಪಕ್ಷಕ್ಕೆ ಹೋದರೂ ಇದೇ ಕತೆ ಎಂದರು.

ನಾಯಕನನ್ನು ಆಯ್ಕೆ ಮಾಡಬೇಕಾದವರು ವಿಧಾನಸಭೆಯ ಶಾಸಕರೇ ಹೊರತು, ಪರಿಷತ್ತು ಸದಸ್ಯರಲ್ಲ ಎಂದರು.

## ಹರಿಹರ ರಸ್ತೆ ಅಪಘಾತ : ಸಾವು

ಹರಿಹರ, ಜೂ.17- ರಾಜನಹಳ್ಳಿ ಬಳಿ ಮರಳು ತುಂಬಿದ ಟಿಪ್ಪರ್ ವಾಹನದ ಗಾಲಿಗೆ ಬೈಕ್ ಸವಾರ ಸಿಲುಕಿ, ಬೈಕ್ ಸವಾರ ಸ್ಥಳದಲ್ಲೇ ಸಾವಿಗೀಡಾದ ಘಟನೆ ಇಂದು ನಡೆದಿದೆ.

ಬೈಕ್ ಸವಾರ ತೌಫಿಕ್ ಆಹ್ಮದ್ ತಂದೆ ಶಫಿವುಲ್ಲಾ ಎಂಬಾತ ಮೃತಪಟ್ಟಿದ್ದು, ಹರಿಹರ ಗ್ರಾಮಾಂತರ ಠಾಣೆಯ ಪಿಎಸ್ಐ ಡಿ. ರವಿಕುಮಾರ್ ಸ್ಥಳಕ್ಕೆ ಆಗಮಿಸಿ ಸ್ಥಳ ಪರಿಶೀಲನೆ ನಡೆಸಿದರು.

## ಅಕ್ರಮ ಸಾಗಾಟ

(1ನೇ ಪುಟದಿಂದ) ಸ್ಫೋಟಕ ವಸ್ತುಗಳನ್ನು ಅಕ್ರಮವಾಗಿ ಸಂಗ್ರಹಣೆ ಮಾಡಿಕೊಂಡು ತೆಗೆದುಕೊಂಡು ಹೋಗುತ್ತಿದ್ದ ವೇಳೆ ದಾಳಿ ಮಾಡಿ, ತಲಾ 200 ಜಿಲೆಟಿನ್‌ಗಳಂತೆ ಎರಡು ರಟ್ಟಿನ ಬಾಕ್ಸ್‌ಗಳಲ್ಲಿ ಒಟ್ಟು 400 ಜಿಲೆಟಿನ್‌ಗಳು, ಒಟ್ಟು 100 ಎಲೆಕ್ಟ್ರಿಕ್ ಡೆಟೋನೇಟರ್‌ಗಳು, ಟ್ರ್ಯಾಕ್ಟರ್ ವಶಪಡಿಸಿಕೊಳ್ಳಲಾಗಿದೆ.

ಗ್ರಾಮಾಂತರ ಪೊಲೀಸ್ ಇನ್ಸ್‌ಪೆಕ್ಟರ್ ಲಿಂಗನಗೌಡ ನೆಗಳೂರು ನೇತೃತ್ವದಲ್ಲಿ ಗ್ರಾಮಾಂತರ ಪೊಲೀಸ್ ಉಪಾಧೀಕ್ಷಕ ನರಸಿಂಹ ವಿ. ತಾಮ್ರಧ್ವಜ ಮಾರ್ಗ ದರ್ಶನದಲ್ಲಿ ಪ್ರೊಬೇಷನರಿ ಪಿಎಸ್ಐ ಎಸ್.ಬಿ. ಅಜ್ಜಪ್ಪ ಮತ್ತು ಸಿಬ್ಬಂದಿಗಳಾದ ಮಂಜನಗೌಡ, ನಾಗರಾಜ್, ಮಹೇಶ್, ನೂರುಲ್ಲಾ ಷರೀಫ್ ಒಳಗೊಂಡ ತಂಡವು ದಾಳಿ ನಡೆಸಿದೆ.

## 153 ಪಾಸಿಟಿವ್ 174 ಜನ ಗುಣ

(1ನೇ ಪುಟದಿಂದ) ಸೋಂಕು ಕಾಣಿಸಿಕೊಂಡಿದೆ. ದಾವಣಗೆರೆ ತಾಲ್ಲೂಕಿನಲ್ಲಿ 3, ಹೊನ್ನಾಳಿ 4, ರಾಣೇಬೆನ್ನೂರು ತಾಲ್ಲೂಕಿನ ಇಬ್ಬರು, ಹಾವೇರಿಯ ಓರ್ವ ಮಹಿಳೆ ಹಾಗೂ ಹರಿಹರದ ಓರ್ವ ಮಹಿಳೆ ಸೇರಿ ಒಟ್ಟು 11 ಜನರು ಕೋವಿಡ್ ಸೋಂಕಿನಿಂದಾಗಿ ಮೃತಪಟ್ಟಿದ್ದಾರೆ. 3 ಬ್ಲಾಕ್ ಫಂಗಸ್ ಪ್ರಕರಣಗಳು ವರದಿಯಾಗಿವೆ.

# ಬಿಜೆಪಿಯ ಬಣ ಸ್ಫೋಟ

(1ನೇ ಪುಟದಿಂದ) ತಕ್ಷಣವೇ ನಾಯಕತ್ವ ಬದಲಾವಣೆ ಮಾಡಿ. ನಾವು ಅಧಿಕಾರದ ಚುಕ್ಕಾಣಿ ಹಿಡಿಯಬಾರದೆಂದರೆ ಇವರನ್ನೇ ಮುಂದುವರೆಸಿ ಎಂದು ಕೆಲವರು ಕಡ್ಡಿ ಮುರಿದಂತೆ ಹೇಳಿದ್ದಾರೆ.

ಮತ್ತೆ ಕೆಲವರು ಇದು ಬಿಜೆಪಿ ಸರ್ಕಾರವಲ್ಲ. ಕುಟುಂಬದ ಸರ್ಕಾರವಾಗಿದೆ. ಭ್ರಷ್ಟಾಚಾರ ತಾಂಡವವಾಡುತ್ತಿದೆ. ನಾವು ಪಕ್ಷದ ನಿಷ್ಠಾವಂತ ಕಾರ್ಯಕರ್ತರು. ನಮ್ಮ ಮಾತಿಗೆ ಮನ್ನಣೆ ನೀಡಿ ಎಂದು ಮನವಿ ಮಾಡಿಕೊಂಡಿದ್ದಾರೆ. ಆದರೆ, ಇದಕ್ಕೆ ವಿರುದ್ಧವಾಗಿ ಕೆಲವು ಶಾಸಕರು ಮತ್ತು ಸಚಿವರು ಕರ್ನಾಟಕದಲ್ಲಿ ಬಿಜೆಪಿ ಇದ್ದರೆ ಯಡಿಯೂರಪ್ಪನವರಿಂದಲೇ, ಅವರಿಂದಲೇ ಸರ್ಕಾರ ಬಂದಿರುವುದು. ಮುಂದಿನ ಚುನಾವಣೆಯನ್ನೂ ಅವರ ನಾಯಕತ್ವದಲ್ಲೇ ನಡೆಸಬೇಕು. ನಾವು ಮತ್ತೆ ಅಧಿಕಾರಕ್ಕೆ ಬರಬೇಕೆಂದರೆ, ರಾಜ್ಯದಲ್ಲಿ ನಾಯಕತ್ವ ಬದಲಾವಣೆ ಮಾಡಬೇಡಿ ಎಂದು ಒತ್ತಾಯಿಸಿದ್ದಾರೆ ಎನ್ನಲಾಗಿದೆ.

ಬೆರಳೆಣಿಕೆಯಷ್ಟು ಮಂದಿ ತಮ್ಮ ಸ್ವಾರ್ಥಕ್ಕಾಗಿ ಯಡಿಯೂರಪ್ಪನವರನ್ನು ಗುರಾಣಿಯಾಗಿಟ್ಟುಕೊಂಡು ಪಕ್ಷ ಮತ್ತು ಸರ್ಕಾರದ ವರ್ಚಸ್ಸಿಗೆ ಧಕ್ಕೆ ತರುತ್ತಿದ್ದಾರೆ. ಅಂತಹವರ ಮೇಲೆ ಇಂದೇ ಶಿಸ್ತು ಕ್ರಮ ಕೈಗೊಂಡರೆ, ರಾಜ್ಯ ಬಿಜೆಪಿಯಲ್ಲಿ ಭಿನ್ನಾಭಿಪ್ರಾಯವೇ ಇರುವುದಿಲ್ಲ.

ಕೊರೊನಾ ಸಂಕಷ್ಟದಲ್ಲೂ ಯಡಿಯೂರಪ್ಪನವರು ಉತ್ತಮ ಆಡಳಿತ ನೀಡುತ್ತಿದ್ದಾರೆ. ಇಂತಹವರನ್ನು ಅಧಿಕಾರದಿಂದ ಕೆಳಗಿಳಿಸಲು ಕೆಲವರು ಪ್ರಯತ್ನಿಸುತ್ತಿದ್ದಾರೆ. ಇದಕ್ಕೆ ಸೊಪ್ಪು ಹಾಕಬೇಡಿ. ಯಡಿಯೂರಪ್ಪನವರ ಬಲದಿಂದಲೇ ಈ ಸರ್ಕಾರ ಬಂದಿದ್ದು. ಅಧಿಕಾರ ಸಿಗದವರು ಇಂತಹ ಕುಚೇಷ್ಟೆ ಮಾಡಿದ್ದಾರೆ ಎಂದು ಆರೋಪಿಸಿದ್ದಾರೆ.

ಅವರನ್ನು ಮುಂದಿಟ್ಟುಕೊಂಡು ಹೋದರೆ, ಪಕ್ಷಕ್ಕೆ ಒಂದು ಸೀಟು ಬರುವುದಿಲ್ಲ. ಅವರ ತಾಳಕ್ಕೆ ತಕ್ಕಂತೆ ಕುಣಿಯಬೇಡಿ. ಜನರ ಮನ್ನಣೆಗೆ ವರಿಷ್ಠರು ಬೆಲೆ ನೀಡಬೇಕು. ಯಾವುದೇ ಕಾರಣಕ್ಕೂ ನಾಯಕತ್ವ ಬದಲಾವಣೆ ಬೇಡ ಎಂದು ಒತ್ತಾಯಿಸಿದ್ದಾರೆ.

ಆ ಬಣ, ಈ ಬಣ, ತಟಸ್ಥ ಬಣ ಯಾವುದಕ್ಕೂ ಅವಕಾಶ ಕೊಡದ ಅರುಣ್‌ಸಿಂಗ್, ಪ್ರತ್ಯೇಕವಾಗಿ ಒಬ್ಬೊಬ್ಬರನ್ನೇ ಕರೆದು, ಅಭಿಪ್ರಾಯ ಸಂಗ್ರಹಿಸಿದರು.

ಸುಮಾರು 50-60ಕ್ಕೂ ಹೆಚ್ಚು ಶಾಸಕರು ಗೌಪ್ಯವಾಗಿ ನಾಯಕತ್ವ ಹಾಗೂ ಸರ್ಕಾರದ ಆಡಳಿತದ ಬಗ್ಗೆ ಮಾಹಿತಿ ನೀಡಿದ್ದಾರೆ ಎನ್ನಲಾಗಿದೆ.

## ತರಳಬಾಳು ಶ್ರೀಗಳ ಜನ್ಮ ದಿನ ನಗರದಲ್ಲಿ ಸಿಹಿ, ಪ್ರಸಾದ ವಿತರಣೆ



ದಾವಣಗೆರೆ, ಜೂ.17- ಸಿರಿಗೆರೆ ತರಳಬಾಳು ಜಗದ್ಗುರು ಡಾ. ಶ್ರೀ ಶಿವಮೂರ್ತಿ ಮಹಾಸ್ವಾಮೀಜಿ ಜನ್ಮದಿನದ ಪ್ರಯುಕ್ತ ನಗರದ ಸಿ.ಜಿ. ಆಸ್ಪತ್ರೆ ಮುಂಭಾಗದಲ್ಲಿ ಸಾರ್ವಜನಿಕರಿಗೆ ಸಿಹಿ ಪ್ರಸಾದ ವಿತರಿಸಲಾಯಿತು. ತರಳಬಾಳು ಸೇವಾ ಸಮಿತಿ ಮತ್ತು ಶಿವಸೈನ್ಯದ ವತಿಯಿಂದ ಹಮ್ಮಿಕೊಂಡಿದ್ದ 1500 ಕ್ಕೂ ಹೆಚ್ಚು ಜನರಿಗೆ ಪ್ರಸಾದ ವಿತರಿಸಲಾಯಿತು.

ಈ ಸಂದರ್ಭದಲ್ಲಿ ತಹಶೀಲ್ದಾರ್ ಗಿರೀಶ್, ಪಾಲಿಕೆ ಆಯುಕ್ತ ವಿಶ್ವನಾಥ್ ಪಿ. ಮುದಜ್ಜಿ, ತರಳಬಾಳು ಸೇವಾ ಸಮಿತಿ ಅಧ್ಯಕ್ಷ ಶಶಿಧರ್ ಹೆಮ್ಮನಬೇತೂರು, ಗೌರವಾಧ್ಯಕ್ಷ ಮಾಗನೂರು ಉಮೇಶ್ ಗೌಡ್ರು, ಲಿಂಗರಾಜ್ ಅಗಸನಕಟ್ಟೆ, ಶ್ರೀನಿವಾಸ್ ಮೆಳ್ಳೇಕಟ್ಟೆ, ಸತೀಶ್ ಸಿರಿಗೆರೆ, ಪ್ರಭು ಕಾವಲಳ್ಳಿ, ಶಿವಕುಮಾರ್ ಕೊರಟಗೆರೆ, ಧನ್ಯಕುಮಾರ್ ಎಲೆಬೇತೂರು, ಪರಮೇಶ್ವರಪ್ಪ ಕಕ್ಕರಗೊಳ್ಳ ಇನ್ನಿತರರಿದ್ದರು.

## ಆನ್ ಲೈನ್ ನಲ್ಲಿ ಇಂದು ರೈತರು - ಕೃಷಿ ವಿಜ್ಞಾನಿಗಳ ಸಂವಾದ

ಐಸಿಎಆರ್-ತರಳಬಾಳು ಕೃಷಿ ವಿಜ್ಞಾನ ಕೇಂದ್ರ, ದಾವಣಗೆರೆ ಭಾರತ ಅಮೃತ ಮಹೋತ್ಸವದ ಅಂಗವಾಗಿ ರೈತರು ಮತ್ತು ವಿಜ್ಞಾನಿಗಳ ಸಂವಾದ ಕಾರ್ಯಕ್ರಮವು (ಕೃಷಿ, ತೋಟಗಾರಿಕೆ, ಪಶುಸಂಗೋಪನೆ, ಮೀನುಗಾರಿಕೆ ಮತ್ತು ಇತರೆ ಕೃಷಿ ವಿಷಯಗಳ ಬಗ್ಗೆ ಪ್ರಶ್ನೋತ್ತರ) ಇಂದು ಬೆಳಗ್ಗೆ 11 ಗಂಟೆಗೆ ಆನ್ ಲೈನ್ ನಲ್ಲಿ ನಡೆಯಲಿದೆ.

ಡಾ. ಟಿ.ಎನ್. ದೇವರಾಜ್, ಡಾ. ಆರ್. ಜಿ. ಗೊಲ್ಲರ್, ಡಾ. ಬಿ.ಓ. ಮಲ್ಲಿಕಾರ್ಜುನ, ಡಾ. ಎಂ.ಜಿ. ಬಸವನಗೌಡ, ಡಾ. ಜಿ.ಕೆ. ಜಯದೇವಪ್ಪ, ಡಾ. ಜೆ. ರಘುರಾಜ, ಡಾ. ಸಣ್ಣಗೌಡರ್ ಭಾಗವಹಿಸಲಿದ್ದಾರೆ. Link: https://meet.google.com/vma-ieha-iam Meeting ID: vma-ieha-iam

**ಬೆಳೆಗಳ ವಿಶ್ಲೇಷಣೆ :** ದಾವಣಗೆರೆ ಜಿಲ್ಲೆಯ ಪ್ರಮುಖ ಬೆಳೆಗಳ ಮಾರುಕಟ್ಟೆ ವಿಶ್ಲೇಷಣೆ ಕುರಿತು ಬೆಂಗಳೂರು ಕೃಷಿ ವಿಶ್ವ ವಿದ್ಯಾಲಯ ಕೃಷಿ ಮಾರುಕಟ್ಟೆ ಮತ್ತು ಸಹಕಾರ ವಿಭಾಗದ ನಿವೃತ್ತ ಪ್ರಾಧ್ಯಾಪಕ ಡಾ. ಟಿ.ಎನ್. ವೆಂಕಟರೆಡ್ಡಿ ಅವರೊಂದಿಗಿನ ಸಂವಾದವು ಇಂದು ಮಧ್ಯಾಹ್ನ 3 ಗಂಟೆಗೆ ನಡೆಯಲಿದೆ.

**ಆನ್ ಲೈನ್ ಲಿಂಕ್ :** https://meet.google.com/txe-rvqs-qnj Meeting ID: txe-rvqs-qnj

## ಮಕ್ಕಳ ಮೇಲೆ ಹೆಚ್ಚು ಪರಿಣಾಮವಿಲ್ಲ

(1ನೇ ಪುಟದಿಂದ) ನಡೆಲಾಗಿತ್ತು. ವಿಶ್ವ ಆರೋಗ್ಯ ಸಂಘಟನೆಯ ಸಭಾಗಿತ್ವದಲ್ಲಿ ಈ ಸಮೀಕ್ಷೆ ನಡೆಸಲಾಗಿತ್ತು. ಇದರಲ್ಲಿ ಎಐಐಎಂಎಸ್‌ನ ನಿರ್ದೇಶಕ ರಣದೀಪ್ ಗುಲೇರಿಯ ಸೇರಿದಂತೆ ಹಲವರು ಭಾಗಿಯಾಗಿದ್ದರು.

# ಜಿಲ್ಲೆಯಲ್ಲಿ ಚುರುಕುಗೊಂಡ ಬಿತ್ತನೆ

**(1ನೇ ಪುಟದಿಂದ)** 27990 ಹೆಕ್ಟೇರ್ ಪೈಕಿ 2943, ಚನ್ನಗಿರಿ 45309 ಹೆ.ಪೈಕಿ 4125, ಹಾಗೂ ನ್ಯಾಮತಿ ತಾಲ್ಲೂಕಿಗೆ 20995 ಹೆಕ್ಟೇರ್ ಬಿತ್ತನೆಗೆ ಗುರಿಯ ಪೈಕಿ 2803 ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆಯಾಗಿದೆ.

ಪ್ರಸಕ್ತ ವರ್ಷದಲ್ಲಿ ಜಿಲ್ಲೆಗೆ ಭತ್ತ 65847, ಜೋಳ, 2400, ರಾಗಿ 7295, ಮೆಕ್ಕೆಜೋಳ 126108, ಬಾಜ್ರಾ 580 ಹಾಗೂ ಸಿರಿ ಧಾನ್ಯ 830 ಹೆಕ್ಟೇರ್ ಪ್ರದೇಶದಲ್ಲಿ ಬೆಳೆಯುವ ಗುರಿ ಹೊಂದಲಾಗಿದೆ. 7265 ಹೆಕ್ಟೇರ್ ಪ್ರದೇಶದಲ್ಲಿ ತೊಗರಿ, 1248 ಹೆ. ಅಲಸಂದೆ, 1152 ಹೆ. ಅವರೆ ಹಾಗೂ ವಿವಿಧ ರೀತಿಯ ದ್ವಿದಳ ಧಾನ್ಯಗಳಿಗೆ 10684 ಹೆಕ್ಟೇರ್ ಗುರಿ ಹೊಂದಲಾಗಿದೆ.

13820 ಹೆಕ್ಟೇರ್ ಶೇಂಗಾ, 2190 ಹೆ. ಸೂರ್ಯಕಾಂತಿ ಸೇರಿ 17356 ಹೆ.ನಲ್ಲಿ ಎಣ್ಣೆ ಕಾಳುಗಳನ್ನು ಹಾಗೂ 10427 ಹೆ.ನಲ್ಲಿ ಹತ್ತಿ ಬೆಳೆಯುವ ಗುರಿ ಇದೆ. ನಿಗದಿತ ಗುರಿಯ ಪೈಕಿ ಈಗಾಗಲೇ ಜಿಲ್ಲೆಯಲ್ಲಿ 17865 ಹೆಕ್ಟೇರ್ ಪ್ರದೇಶದಲ್ಲಿ ಮೆಕ್ಕೆಜೋಳ, 1106 ಹೆ. ಹತ್ತಿ 648 ಹೆ. ಶೇಂಗಾ, 861 ಹೆ.ಪ್ರದೇಶದಲ್ಲಿ ತೊಗರಿ ಬಿತ್ತನೆಯಾಗಿದೆ.

**ವಾಡಿಕೆಗಿಂತ ಹೆಚ್ಚು ಮಳೆ:** ಕಳೆದ ಜನವರಿ 1 ರಿಂದ ಜೂನ್ 16ರವರೆಗೆ ಜಿಲ್ಲೆಯಲ್ಲಿ ವಾಡಿಕೆಗಿಂತ ಶೇ.52ರಷ್ಟು ಹೆಚ್ಚು ಮಳೆಯಾಗಿದೆ. ಜೂನ್ 1ರಿಂದ 16ರವರೆಗೆ ಜಿಲ್ಲೆಯಲ್ಲಿ 44.7 ಮಿ.ಮೀ. ವಾಡಿಕೆ ಮಳೆಗೆ 46.8 ಮಿ.ಮೀ. ಮಳೆಯಾಗಿದ್ದು, ಶೇ.5ರಷ್ಟು ಹೆಚ್ಚು ಮಳೆಯಾಗಿದೆ.

ಚನ್ನಗಿರಿ ತಾಲ್ಲೂಕಿನಲ್ಲಿ 51.7 ಮಿ.ಮೀ. ವಾಡಿಕೆ ಮಳೆಗೆ 40.2 ಮಿ.ಮೀ., ದಾವಣಗೆರೆ 43.7 ವಾಡಿಕೆ ಮಳೆಗೆ 43.6 ಮಿ.ಮೀ., ಹರಿಹರ 38.6 ಮಿ.ಮೀ. ವಾಡಿಕೆಗೆ 48.4 ಮಿ.ಮೀ., ಹೊನ್ನಾಳಿ 47.6 ವಾಡಿಕೆಗೆ 42.4 ಮಿ.ಮೀ., ಜಗಳೂರು 33.9 ಮಿ.ಮೀ. ವಾಡಿಕೆ ಮಳೆಗೆ 58.6 ಮಿ.ಮೀ. ಮಳೆ ಹಾಗೂ ನ್ಯಾಮತಿ ತಾಲ್ಲೂಕಿನಲ್ಲಿ 60.6 ವಾಡಿಕೆ ಮಳೆಗೆ 48.5ರಷ್ಟು ವಾಸ್ತವ ಮಳೆಯಾಗಿದೆ. ಚನ್ನಗಿರಿಯಲ್ಲಿ ಶೇ.22 ಹಾಗೂ ನ್ಯಾಮತಿಯಲ್ಲಿ ಶೇ.20ರಷ್ಟು ವಾಡಿಕೆಗಿಂತ ಕಡಿಮೆ ಮಳೆಯಾಗಿದೆ. ಆದರೆ ಜಗಳೂರು ತಾಲ್ಲೂಕಿನಲ್ಲಿ ವಾಡಿಕೆಗಿಂತ ಶೇ.73ರಷ್ಟು ಹೆಚ್ಚು ಮಳೆಯಾಗಿದೆ.

# ಶಿಶು ಜನನ, ಮರಣ ನಿಖರ ಅಂಕಿ - ಅಂಶಗಳಿಗಾಗಿ ವಿಶೇಷ ಆ್ಯಪ್ ಅಭಿವೃದ್ಧಿ ಪಡಿಸಲು ಸಲಹೆ

ದಾವಣಗೆರೆ, ಜೂ.17- ಜಿಲ್ಲೆಯಲ್ಲಿ ಮಕ್ಕಳ ಲಿಂಗಾನುಪಾತ 2011ರ ಜನಗಣತಿಯಲ್ಲಿ ಒಂದು ಸಾವಿರ ಗಂಡು ಮಕ್ಕಳಿಗೆ 948 ಹೆಣ್ಣು ಮಕ್ಕಳ ಅನುಪಾತ ದಾಖಲಾಗಿದೆ. 2021 ರ ಜನಗಣತಿಗೆ ಸಿದ್ಧತೆಗಳೂ ಆಗುತ್ತಿವೆ. ಈ ಹಿಂದಿನ ಅಂಕಿ - ಅಂಶಗಳ ನಿಖರತೆಯ ಬಗ್ಗೆ ಸಂಶಯವಿದ್ದು, ಜಿಲ್ಲೆಯಲ್ಲಿ ಎಲ್ಲಾ ಗರ್ಭಿಣಿಯರ ನೋಂದಣಿ ಕಡ್ಡಾಯವಾಗಿ ಆಗಬೇಕು. ಜಿಲ್ಲೆಯ ಶಿಶು ಜನನ ಮತ್ತು ಮರಣಗಳ ಅಂಕಿ - ಅಂಶಗಳ ದಾಖಲಿಗೆ ವಿಶೇಷ ಆ್ಯಪ್ ಅಭಿವೃದ್ಧಿಪಡಿಸಿದಲ್ಲಿ, ಜಿಲ್ಲೆಯಲ್ಲಿನ ಶಿಶುಗಳ ಜನನ, ಮರಣ ಮತ್ತು ಲಿಂಗಾನುಪಾತದ ನಿಖರ ಅಂಕಿ - ಅಂಶಗಳನ್ನು ಪಡೆಯಲು ಸಾಧ್ಯವಾಗಲಿದೆ ಎಂದು ಪಿಸಿ ಅಂಡ್ ಪಿಎನ್‌ಡಿಟಿ ಜಿಲ್ಲಾ ಸಲಹಾ ಸಮಿತಿಯ ಅಧ್ಯಕ್ಷ ಡಾ. ಎನ್.ಕೆ. ಕಾಳಪ್ಪನವರ್ ಸಲಹೆ ನೀಡಿದರು.

ಇಲ್ಲಿನ ಉಪವಿಭಾಗಾಧಿಕಾರಿಗಳ ಕಚೇರಿಯಲ್ಲಿ ಇಂದು ಏರ್ಪಡಿಸಲಾಗಿದ್ದ ಜಿಲ್ಲಾ ಪಿಸಿ ಅಂಡ್ ಪಿಎನ್‌ಡಿಟಿ ಸಲಹಾ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಶಿಶುಗಳ ಜನನ, ಮರಣದ ಬಗ್ಗೆ ಆರ್‌ಸಿಹೆಚ್ ಪೋರ್ಟಲ್‌ನಲ್ಲಿ ಕೇವಲ ಬಿಪಿಎಲ್ ಕುಟುಂಬಗಳ ಶಿಶು ಜನನದ ಬಗ್ಗೆ ಮಾತ್ರ ದಾಖಲಾಗುತ್ತಿದ್ದು, ಇತರೆ ಕುಟುಂಬದ ಜನನಗಳ ಬಗ್ಗೆ ದಾಖಲಾಗುತ್ತಿಲ್ಲ. ಅಲ್ಲದೇ ಕೆಡಿಪಿ ವರದಿಯಲ್ಲಿ ಶಿಶುಗಳ ಜನನದ ಬಗ್ಗೆ ಆಯಾ ತಾಲ್ಲೂಕುವಾರು ಮಾಹಿತಿ ಸಲ್ಲಿಕೆಯಾಗುತ್ತವೆ. ಆದರೆ, ಇದರಲ್ಲಿ ಶಿಶುವಿನ ಲಿಂಗತ್ವದ ಬಗ್ಗೆ ಮಾಹಿತಿ ದಾಖಲಾಗುವುದಿಲ್ಲ. ಹೀಗಾಗಿ ಜನಗಣತಿಗೆ ಸಲ್ಲಿಕೆಯಾಗುವ ವರದಿಯಲ್ಲಿ ನ್ಯೂನತೆ ಇರುವ ಸಾಧ್ಯತೆಗಳಿದ್ದು, ಜಿಲ್ಲೆಯಲ್ಲಿ ಶಿಶುಗಳ ಜನನ ಮತ್ತು ಮರಣ, ಲಿಂಗತ್ವದ ಬಗ್ಗೆ ನಿಖರ ಅಂಕಿ-ಅಂಶ ಸಂಗ್ರಹಣೆಗೆ ಸೂಕ್ತ ವ್ಯವಸ್ಥೆ ಇದ್ದಂತೆ ಕಂಡುಬರುತ್ತಿಲ್ಲ ಎಂದು ಅವರು ಹೇಳಿದರು.

ಜಿಲ್ಲೆಯ ಹಲವಾರು ಖಾಸಗಿ ನರ್ಸಿಂಗ್ ಹೋಂಗಳಲ್ಲಿ ಆಗುವ ಶಿಶು ಜನನ ಅಥವಾ ಮರಣದ ಬಗ್ಗೆ ದಾಖಲು ಸರಿಯಾಗಿ ಆಗುತ್ತಿಲ್ಲ. ಗರ್ಭಿಣಿಯರ ನೋಂದಣಿ ವಿಷಯದಲ್ಲಿ ಬಿಪಿಎಲ್ ಕುಟುಂಬಗಳ ನೋಂದಣಿ ಮಾತ್ರ ಆಗುತ್ತಿದ್ದು, ಎಪಿಎಲ್ ಕುಟುಂಬಗಳ ನೋಂದಣಿ ಆಗುತ್ತಿಲ್ಲ. ಪ್ರತಿಯೊಬ್ಬ ತಾಯಂದಿರಿಗೂ ತಾಯಿ ಕಾರ್ಡ್ ನೀಡಲಾಗುತ್ತಿಲ್ಲ. ಹೀಗಾಗಿ ಶಿಶು ಜನನ, ಮರಣದ ಅಂಕಿ-ಅಂಶದಲ್ಲಿ ವ್ಯತ್ಯಾಸವಾಗುತ್ತಿದೆ. ಹೀಗಾಗಿ ಗರ್ಭಿಣಿಯರ ನೊಂದಣಿ ಸಂಖ್ಯೆ, ಶಿಶು ಜನನ, ಗರ್ಭಪಾತದ ಅಂಕಿ-ಅಂಶಗಳು ಒಂದಕ್ಕೊಂದು ತಾಳೆಯಾಗದಿರುವುದರಿಂದ ಲಿಂಗಾನುಪಾತದಲ್ಲಿ ಅಸಮತೋಲನ ಕಂಡುಬರುತ್ತಿದೆ ಎಂದು ಹೇಳಿದರು.

ಇದಕ್ಕೆ ಪ್ರತಿಕ್ರಿಯಿಸಿದ ಡಿಹೆಚ್‌ಓ ಡಾ. ನಾಗರಾಜ್ ಅವರು, ಸರ್ಕಾರಿ ಅಥವಾ ಖಾಸಗಿ ನರ್ಸಿಂಗ್ ಹೋಂಗಳಲ್ಲಿ ದಾಖಲಾಗುವ ಎಪಿಎಲ್ ಕುಟುಂಬಸ್ಥರಿಗೆ ತಾಯಿ ಕಾರ್ಡ್ ನೀಡುವುದು ಕಡ್ಡಾಯವಿಲ್ಲ, ಕಾರ್ಡ್ ಪಡೆಯಲೇಬೇಕು ಎಂದು ಒತ್ತಾಯಿಸುವಂತೆಯೂ ಇಲ್ಲ ಎಂದು ಸ್ಪಷ್ಟಪಡಿಸಿದರು.

ಸಮಿತಿಯ ಸಕ್ಷಮ ಪ್ರಾಧಿಕಾರಿಯಾಗಿರುವ ಉಪವಿಭಾಗಾಧಿಕಾರಿ ಶ್ರೀಮತಿ ಮಮತಾ ಹೊಸಗೌಡರ್ ಅವರು ಪ್ರತಿಕ್ರಿಯಿಸಿ, ಈ ಬಗ್ಗೆ ಆ್ಯಪ್ ಅಭಿವೃದ್ಧಿಗೆ ಪ್ರಾಮಾಣಿಕ ಯತ್ನ ಮಾಡಲಾಗುವುದು ಎಂದು ತಿಳಿಸಿದರು.

**ಸಮಿತಿಯಿಂದ ಸ್ಥಳ ಪರಿಶೀಲನೆಗೆ ನಿರ್ಧಾರ:** ಜಿಲ್ಲೆಯಲ್ಲಿ ಕೆಲವು ನರ್ಸಿಂಗ್ ಹೋಂ ಮಾಲೀಕರು ಅಲ್ಟ್ರಾಸೌಂಡ್ ಸ್ಕ್ಯಾನಿಂಗ್ ಉಪಕರಣಗಳನ್ನು ಅಳವಡಿಸಲು ಹಾಗೂ ಉಪಯೋಗಿಸಲು ನಿಯಮಾನುಸಾರ ನೋಂದಣಿ ಮಾಡದೆ, ನಿಯಮಾನುಸಾರ ಮಾರಾಟ ಅಥವಾ ಸ್ಥಳಾಂತರದ ಮಾಹಿತಿ ನೀಡದೆ, ಯಂತ್ರ ಬಳಸುತ್ತಿರುವ ಬಗ್ಗೆ ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು.

ಸಮಿತಿಯ ಸದಸ್ಯರೂ ಆದ ಸಾಮಾಜಿಕ ಸೇವಾ ಕಾರ್ಯಕರ್ತ ಎಂ.ಜಿ. ಶ್ರೀಕಾಂತ್, ಸಮಿತಿಯ ಮತ್ತೋರ್ವ ಸದಸ್ಯರೂ ಆದ ವಕೀಲ ರವಿಕುಮಾರ್ ಅವರುಗಳು ಮಾತನಾಡಿ, ಅಲ್ಟ್ರಾಸೌಂಡ್ ಸ್ಕ್ಯಾನಿಂಗ್ ಯಂತ್ರಗಳ ಅಳವಡಿಕೆಗಾಗಿ ಅನುಮತಿ ಪಡೆಯಲು ಅಥವಾ ಸ್ಥಳಾಂತರಿಸಲು ಅಥವಾ ಮಾರಾಟ ಮಾಡಲು ಅರ್ಜಿ ಸಲ್ಲಿಸುವ ನರ್ಸಿಂಗ್ ಹೋಂಗಳು ಪಿಸಿ ಅಂಡ್ ಪಿಎನ್‌ಡಿಟಿ ಸಲಹಾ ಸಮಿತಿಯಿಂದ ನಿಯಮಾನುಸಾರ ಅನುಮತಿ ಪಡೆಯುವುದಕ್ಕೂ ಮೊದಲೇ ಬಳಕೆ ಮಾಡುತ್ತಿರುವ ಸಾಧ್ಯತೆಗಳಿವೆ. ಅನುಮತಿಗೂ ಮುನ್ನ ಅಂತಹ ಯಂತ್ರಗಳ ಬಳಕೆಯಾಗಿಲ್ಲ ಎನ್ನುವ ಬಗ್ಗೆ ಸಂಬಂಧಪಟ್ಟ ಕಂಪನಿಯಿಂದಲೇ ಅಧಿಕೃತ ದೃಢೀಕರಣ ಪಡೆದ ಬಳಿಕವೇ, ಅನುಮತಿ ನೀಡಬೇಕು. ನಿಯಮ ಉಲ್ಲಂಘನೆ ಕಂಡುಬಂದಲ್ಲಿ, ಅಂತಹ ಯಂತ್ರಗಳನ್ನು ಸಕ್ಷಮ ಪ್ರಾಧಿಕಾರದಿಂದ ಜಪ್ತಿ ಮಾಡಬೇಕು ಎಂದು ಒತ್ತಾಯಿಸಿದರು.

ಸಭೆಯಲ್ಲಿ ಜಿಲ್ಲಾ ಕುಟುಂಬ ಕಲ್ಯಾಣಾಧಿಕಾರಿ ಡಾ. ಎ.ಎಂ.ರೇಣುಕಾರಾಧ್ಯ, ಸಮಿತಿಯ ಸದಸ್ಯರಾದ ಡಾ. ಸುಮಿತ್ರ ಉಪಸ್ಥಿತರಿದ್ದರು.

> "ಜಿಲ್ಲೆಯಲ್ಲಿ ಮಕ್ಕಳ ಲಿಂಗಾನುಪಾತ 2001 ರ ಜನಗಣತಿಯಲ್ಲಿ 1000 ಗಂಡು ಮಕ್ಕಳಿಗೆ 946 ಹೆಣ್ಣು, 2011 ರ ಜನಗಣತಿಯಲ್ಲಿ 948 ಹೆಣ್ಣು ಮಕ್ಕಳ ಅನುಪಾತ ದಾಖಲಾಗಿದೆ. ಅಂದರೆ ಜಿಲ್ಲೆಯಲ್ಲಿ ಹೆಣ್ಣು ಮಕ್ಕಳ ಅನುಪಾತ ಕಡಿಮೆ ಇದೆ ಎಂಬುದು ದಾಖಲಾಗಿದೆ.
>
> **- ಡಾ. ಎನ್.ಕೆ. ಕಾಳಪ್ಪನವರ್,**
> ಅಧ್ಯಕ್ಷರು, ಪಿಸಿ ಅಂಡ್ ಪಿಎನ್‌ಡಿಟಿ
> ಜಿಲ್ಲಾ ಸಲಹಾ ಸಮಿತಿ

# ಕೋವಿಡ್ ಕೇರ್ ಸೆಂಟರ್‌ಗೆ ಶಾಂತನಗೌಡ ಭೇಟಿ, ಮಹಿಳೆಯರೊಂದಿಗೆ ಮಾತಿನ ಚಕಮಕಿ



ಹೊನ್ನಾಳಿ, ಜೂ.17 - ತಾಲ್ಲೂಕಿನ ಅರಬಗಟ್ಟೆ ಕೋವಿಡ್ ಕೇರ್ ಸೆಂಟರ್‌ನಲ್ಲಿ ರೇಣುಕಾಚಾರ್ಯ ವಾಸ್ತವ್ಯ ಹೂಡಿದ ಬಗ್ಗೆ ಮಾತನಾಡುವ ಭರದಲ್ಲಿ ಇಲ್ಲಿ ಕ್ವಾರಂಟೈನ್‌ನಲ್ಲಿರುವ ಮಹಿಳೆಯರನ್ನು ನೀವು ಅವಮಾನಿಸಿದ್ದೀರಿ ಎಂದು ಕೋವಿಡ್ ಕೇರ್ ಸೆಂಟರ್‌ನಲ್ಲಿ ಇರುವ ತಾಲ್ಲೂಕಿನ ಹೊಸಹಳ್ಳಿ ಗ್ರಾಮದ ನಯನ, ಹಣ್ಣು-ಮಿನರಲ್ ವಾಟರ್ ಬಾಟಲ್‌ಗಳನ್ನು ವಿತರಿಸಲು ಗುರುವಾರ ಆಗಮಿಸಿದ ಮಾಜಿ ಶಾಸಕ ಡಿ.ಜಿ. ಶಾಂತನಗೌಡ ಅವರನ್ನು ಪ್ರಶ್ನಿಸಿದ ಪ್ರಸಂಗ ನಡೆಯಿತು.

ಇಲ್ಲಿ ಹಲವಾರು ಮಹಿಳೆಯರು ಕ್ವಾರಂಟೈನ್‌ನಲ್ಲಿದ್ದಾರೆ. ನನ್ನೊಂದಿಗೆ ನಮ್ಮ ತಾಯಿಯೂ ಇದ್ದಾರೆ. ಹೀಗೆ ನೀವು ಮಾತನಾಡಿದ್ದು ಎಷ್ಟು ಸರಿ? ರೇಣುಕಾಚಾರ್ಯ ಅವರು ಇಲ್ಲಿ ವಾಸ್ತವ್ಯ ಹೂಡುತ್ತಿರುವ ಬಗ್ಗೆ ನೀವು ಸಮಾರಂಭವೊಂದರಲ್ಲಿ ಮಾತನಾಡಿರುವುದು ನಮ್ಮ ಮನಸ್ಸಿಗೆ ಆಘಾತವನ್ನುಂಟು ಮಾಡಿದೆ ಎಂದು ತಿಳಿಸಿದರು. ಸಮಾರಂಭವೊಂದರಲ್ಲಿ ಮಾಜಿ ಶಾಸಕ ಶಾಂತನ ಗೌಡ ಮಾತನಾಡಿರುವ ವಿಡಿಯೋವನ್ನು ಪ್ರದರ್ಶಿಸಿ, ಇದಕ್ಕೆ ನೀವು ಏನು ಹೇಳುತ್ತೀರಿ? ಎಂದು ಪ್ರಶ್ನಿಸಿದರು.

ನಯನ ಅವರ ಪ್ರಶ್ನೆಗೆ ಉತ್ತರಿಸಿದ ಶಾಂತನಗೌಡ, ನನಗೆ ಮಹಿಳೆಯರ ಬಗ್ಗೆ ಅಪಾರ ಗೌರವವಿದೆ. ಇಲ್ಲಿ ಇರುವ ಮಹಿಳೆಯರ ಬಗ್ಗೆ ನಾನು ಮಾತನಾಡಿಲ್ಲ. ನೀವು ನನ್ನ ಮಾತುಗಳನ್ನು ತಪ್ಪಾಗಿ ಅರ್ಥೈಸಿಕೊಂಡಿದ್ದೀರಿ ಎಂದು ಸಮರ್ಥಿಸಿಕೊಂಡರು. ಶಾಂತನಗೌಡ ಅವರ ಸ್ಪಷ್ಟನೆಯಿಂದ ತೃಪ್ತರಾಗದ ಕೆಲವು ಮಹಿಳೆಯರು, ಕಾಂಗ್ರೆಸ್ ಪಕ್ಷದ ವತಿಯಿಂದ ವಿತರಿಸಲು ತಂದಿದ್ದ ಹಣ್ಣು-ಮಿನರಲ್ ವಾಟರ್‌ಗಳ ಬಾಟಲ್‌ಗಳನ್ನು ತಿರಸ್ಕರಿಸಿ ತಮ್ಮ ವಾಸ್ತವ್ಯದ ಕೊಠಡಿಗಳತ್ತ ಹೆಜ್ಜೆ ಹಾಕಿದರು.

ಕಾಂಗ್ರೆಸ್ ಮುಖಂಡರಾದ ಹೆಚ್. ಬಿ. ಮಂಜಪ್ಪ, ಗದಿಗೇಶ್, ಸಿದ್ದಪ್ಪ, ಶಿವಯೋಗಿ, ರಂಜಿತ್, ಅಮಿತ್, ಮಧುಗೌಡ, ಪ್ರಕಾಶ್, ಮನು ವಾಲಜ್ಜಿ, ಸುರೇಶ್ ಮತ್ತಿತರರು ಶಾಂತನಗೌಡ ಅವರೊಂದಿಗಿದ್ದರು.

# ಕಸ್ಟಮರ್ ಕೇರ್ ಅಧಿಕಾರಿ ನೆಪದಲ್ಲಿ ಖಾತೆ ಹಣಕ್ಕೆ ಕನ್ನ

ದಾವಣಗೆರೆ, ಜೂ.17- ಕಸ್ಟಮರ್ ಕೇರ್ ಅಧಿಕಾರಿ ಸೋಗಿನಲ್ಲಿ ಮಹಿಳೆಯೊಬ್ಬರಿಗೆ ಕೋವಿಡ್ ಕೂಪನ್ ಕಳುಹಿಸುವುದಾಗಿ ನಂಬಿಸಿ 2.23 ಲಕ್ಷ ರೂ. ವಂಚಿಸಲಾಗಿದೆ.

ತಾಲ್ಲೂಕಿನ ಆನಗೋಡು ಗ್ರಾಮದ ಬಿ.ಫಾತಿಮಾ ಹಣ ಕಳೆದುಕೊಂಡ ಮಹಿಳೆ. ಈಕೆಗೆ ಕಸ್ಟಮರ್ ಕೇರ್ ಅಧಿಕಾರಿ ಎಂದು ಕರೆ ಮಾಡಿದ ಅಪರಿಚಿತನು ಕೋವಿಡ್ ಕೂಪನ್ ಕಳುಹಿಸುವುದಾಗಿ ನಂಬಿಸಿ, ಆ್ಯಪ್‌ವೊಂದನ್ನು ಡೌನ್‌ಲೋಡ್ ಮಾಡಿಕೊಂಡು ಅದರಲ್ಲಿ ಪೇ ಎಂದು ನಮೂದಿಸುವಂತೆ ಹೇಳಿದ್ದಾನೆ. ಈತನ ಮಾತಿನಂತೆ ಮಾಹಿತಿ ನೀಡಿದಾಗ ಈಕೆಯ ಖಾತೆಯಿಂದ 1,73,691 ರೂ. ಹಾಗೂ ಅಳಿಯನ ಬ್ಯಾಂಕ್ ಖಾತೆಯಿಂದ 49,802 ರೂ. ಸೇರಿ ಒಟ್ಟು 2,23,493 ರೂ. ಕಡಿತವಾಗಿದೆ ಎಂದು ಫಾತಿಮಾ ಅವರು ಸಿಇಎನ್ ಅಪರಾಧ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

# ನನ್ನ ದೂರವಾಣಿ ಕದ್ದಾಲಿಕೆ : ತನಿಖೆಗೆ ಬೆಲ್ಲದ್ ಒತ್ತಾಯ

ಬೆಂಗಳೂರು, ಜೂ. 17 – ತಮ್ಮ ದೂರವಾಣಿ ಕದ್ದಾಲಿಕೆ ಮಾಡಲಾಗುತ್ತಿದೆ ಹಾಗೂ ತಮ್ಮನ್ನು ಪ್ರಕರಣವೊಂದರಲ್ಲಿ ಸಿಲುಕಿಸುವ ಸಂಚು ನಡೆದಿದೆ ಎಂದು ಶಾಸಕ ಅರವಿಂದ ಬೆಲ್ಲದ್ ಅವರು ಆರೋಪಿಸಿದ್ದು, ಈ ಬಗ್ಗೆ ತನಿಖೆ ನಡೆಸುವಂತೆ ಒತ್ತಾಯಿಸಿದ್ದಾರೆ.



ಗೃಹ ಸಚಿವ ಬಸವರಾಜ ಬೊಮ್ಮಾಯಿ ಹಾಗೂ ವಿಧಾನಸಭೆಯ ಸಭಾಪತಿ ವಿಶ್ವೇಶ್ವರ ಹೆಗಡೆ ಕಾಗೇರಿ ಅವರಿಗೆ ಪತ್ರ ಬರೆದಿರುವ ಬೆಲ್ಲದ್, ಯುವರಾಜ ಸ್ವಾಮಿ ಎಂದು ಹೇಳಿಕೊಳ್ಳುವ ವ್ಯಕ್ತಿ ತನಗಷ್ಟೇ ಅಲ್ಲದೇ ತನ್ನ ಆಪ್ತ ಸಹಾಯಕನಿಗೂ ಕರೆ ಮಾಡುತ್ತಿದ್ದಾನೆ ಎಂದು ಹೇಳಿದ್ದಾರೆ.

# ಹೆಸರು ದುರ್ಬಳಕೆ : ಕಾನೂನು ಕ್ರಮಕ್ಕೆ ಆಗ್ರಹ




ಹರಿಹರ, ಜೂ.17 - ಪ್ರೊ.ಬಿ.ಕೃಷ್ಣಪ್ಪ ಸ್ಥಾಪಿತ ಕರ್ನಾಟಕ ದಲಿತ ಸಂಘರ್ಷ ಸಮಿತಿಯ ಹೆಸರನ್ನು ದುರ್ಬಳಕೆ ಮಾಡಿಕೊಳ್ಳುವವರ ವಿರುದ್ಧ ಕಾನೂನು ಕ್ರಮಕೈಗೊಳ್ಳಬೇಕೆಂದು ಆಗ್ರಹಿಸಿ ದಸಂಸ (ಪ್ರೊ. ಬಿ.ಕೃಷ್ಣಪ್ಪ ಸ್ಥಾಪಿತ) ಕಾರ್ಯಕರ್ತರು ಗುರುವಾರ ಸಿಪಿಐ ಯು. ಸತೀಶ್ ಕುಮಾರ್ ಅವರಿಗೆ ಮನವಿ ನೀಡಿದರು.

ನಂತರ ದಸಂಸ ತಾಲ್ಲೂಕು ಸಂಚಾಲಕ ಪಿ.ಜೆ. ಮಹಾಂತೇಶ್ ಮಾತನಾಡಿ, ಹರಿಹರದವರೇ ಆದ ಪ್ರೊ.ಬಿ.ಕೃಷ್ಣಪ್ಪನವರು ದಲಿತ ಸಂಘರ್ಷ ಸಮಿತಿಯನ್ನು 1974ರಲ್ಲಿ ಸ್ಥಾಪಿಸಿದ್ದು, 1975ರಲ್ಲಿ ಕಾನೂನುಬದ್ಧವಾಗಿ ನೋಂದಣಿಯಾದ ಸಂಘಟನೆಯಾಗಿದೆ. ಆದರೆ, 2008ರಲ್ಲಿ ಭದ್ರಾವತಿ ಸತ್ಯ, ವೆಂಕಟಗಿರಿ ಮತ್ತಿತರರು ತಮ್ಮದೇ ನಿಜ ವಾದ ದಸಂಸ ಎಂದು ಹೇಳಿಕೊಳ್ಳುತ್ತಿ ದ್ದರು. ಆಗ ಪ್ರಕರಣ ಕೋರ್ಟ್ ಮೆಟ್ಟಿ ಲೇರಿದ್ದು, ಸುದೀರ್ಘ ವಿಚಾರಣೆ ನಂತರ ಭದ್ರಾವತಿಯ ನಾಲ್ಕನೇ ಹೆಚ್ಚುವರಿ ಸಿವಿಲ್ ನ್ಯಾಯಾಲಯ 24/03/2021 ರಂದು ತೀರ್ಪು ನೀಡಿದ್ದು, ಪ್ರತಿವಾದಿಗಳು ಪ್ರೊ. ಕೃಷ್ಣಪ್ಪ ಸ್ಥಾಪಿತ ಡಿಎಸ್‌ಎಸ್ ಹೆಸರು ಬಳಕೆ ಮಾಡದಂತೆ, ಆ ಹೆಸರಿನಲ್ಲಿ ಯಾವುದೇ ಕಾರ್ಯ ಕ್ರಮ ಆಯೋಜಿ ಸದಂತೆ ಮತ್ತು ಸದರಿ ಸಂಘಟನೆಯ ಪದಾಧಿಕಾರಿ ಗಳೆಂದು ಹೇಳಿಕೊಳ್ಳದಂತೆ ಶಾಶ್ವತ ನಿರ್ಬಂಧಕಾಜ್ಞೆ ನೀಡಿ ಆದೇಶಿಸಿದೆ ಎಂದು ವಿವರಿಸಿದರು.

ದಸಂಸ ಮಹಿಳಾ ವಿಭಾಗದ ಜಿಲ್ಲಾ ಸಂಚಾಲಕರಾದ ಕೆ. ವಿಜಯಲಕ್ಷ್ಮಿ ಮಾತನಾಡಿದರು.

ಈ ಸಂದರ್ಭದಲ್ಲಿ ಪದಾಧಿಕಾರಿಗಳಾದ ಜಿ.ಎಚ್. ಸುಭಾಷ್, ಹನುಮಂತಪ್ಪ ಅಣಜಿ, ಪ್ರದೀಪ್ ದಾವಣಗೆರೆ, ಹನುಮಂತಪ್ಪ ಬೇತೂರು, ಮಹಾಂ ತೇಶ್ ಹಾಲುವರ್ತಿ, ದುರ್ಗಾ ಪ್ರಸಾದ್ ಆಲೂರು, ಆರ್. ಎಸ್. ಕವಿತಾ, ರವಿಕುಮಾರ್ ಮಾರ್ಸ್ ಇತರರಿದ್ದರು.

# ಲಸಿಕೆ ಹಾಕಿಸಿಕೊಳ್ಳಲು ಭಯ ಬೇಡ



**ಹರಪನಹಳ್ಳಿ ತಾ.ಪಂ ಕಾರ್ಯನಿರ್ವಾಹಕ ಅಧಿಕಾರಿ ಪಿ.ವಿವೇಕಾನಂದ ಕರೆ**

ಹರಪನಹಳ್ಳಿ, ಜೂ.17 - ಕೊ ರೊ ನಾ ದ ೦ ತ ಹ ಮಹಾಮಾರಿ ವೈರಸ್‌ನಿಂದ ದೂರ ಉಳಿಯಬೇಕಾದರೆ, ಎಲ್ಲಾ ವಿಕಲಚೇತನರು ಕಡ್ಡಾಯವಾಗಿ ಲಸಿಕೆಯನ್ನು ಹಾಕಿಸಿಕೊಳ್ಳಬೇಕು ಎಂದು ತಾಲ್ಲೂಕು ಪಂಚಾಯ್ತಿ ಕಾರ್ಯನಿರ್ವಾಹಕ ಅಧಿಕಾರಿ ಪಿ.ವಿ ವೇಕಾನಂದ ಹೇಳಿದರು.

ತಾಲ್ಲೂಕು ಪಂಚಾಯ್ತಿ ಆವರಣದಲ್ಲಿರುವ ವಿಕಲಚೇತನರ ಕಛೇರಿಯಲ್ಲಿ ಮಾನಸಿಕ ಅಸ್ವಸ್ಥ ವಿಕಲಚೇತನರಿಗೆ ಗಿವ್ ಇಂಡಿಯಾ ಸಹಕಾರದಿಂದ ಎಪಿಡಿ (ಪೀಪಲ್ ವಿತ್ ಡಿಸೆಬಿಲಿಟಿ) ಸಂಸ್ಥೆ ವತಿಯಿಂದ 50 ಜನರಿಗೆ ರೇಷನ್ ಕಿಟ್ ವಿತರಿಸಿ ಅವರು ಮಾತನಾಡಿದರು.

ಲಸಿಕೆ ಹಾಕಿಸಿಕೊಳ್ಳಲು ವಿಕಲಚೇತನರು ಭಯ ಮತ್ತು ಆತಂಕದಿಂದ ಹಿಂಜರಿಯುತ್ತಿದ್ದಾರೆ. ಈ ಹಿಂಜರಿಕೆಯನ್ನು ಬಿಟ್ಟು ಎಲ್ಲಾ 18 ವರ್ಷ ಮೇಲ್ಪಟ್ಟ ವಿಕಲಚೇತನರು ಲಸಿಕೆ ಹಾಕಿಸಿಕೊಳ್ಳಬೇಕು ಎಂದರು.

ಎಪಿಡಿ ಸಂಸ್ಥೆಯ ಸಮಾಲೋಚಕ ಸಂತೋಷ್ ಮಾತನಾಡಿದರು. ಈ ಸಂದರ್ಭದಲ್ಲಿ ಮಾನಸಿಕ ಪೋಷಕರ ಸಂಘದ ಅಧ್ಯಕ್ಷ ಮಲ್ಲೇಶಪ್ಪ, ಎಂಆರ್‌ಡಬ್ಲ್ಯೂಆರ್ ಧನರಾಜ್, ಎಪಿಡಿ ಸಂಸ್ಥೆಯ ಸಮಾಲೋಚಕರಾದ ಶ್ವೇತಾ ಇನ್ನಿತರರಿದ್ದರು.

## ನಗರಕ್ಕೆ ನಾಳೆ ಸಚಿವ ಈಶ್ವರಪ್ಪ

ದಾವಣಗೆರೆ, ಜೂ.17- ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಕೆ.ಎಸ್.ಈಶ್ವರಪ್ಪ ಅವರು ನಾಳೆ ಮತ್ತು ನಾಡಿದ್ದು ಜಿಲ್ಲಾ ಪ್ರವಾಸ ಕೈಗೊಳ್ಳಲಿದ್ದಾರೆ. ನಾಳೆ ದಿನಾಂಕ 18ರ ಶುಕ್ರವಾರ ರಾತ್ರಿ 8.30ಕ್ಕೆ ದಾವಣಗೆರೆಗೆ ಆಗಮಿಸಿ ವಾಸ್ತವ್ಯ ಮಾಡುವರು. ನಾಡಿದ್ದು ದಿನಾಂಕ 19 ರ ಶನಿವಾರ ಬೆಳಿಗ್ಗೆ 8.30ಕ್ಕೆ ದಾವಣಗೆರೆಯಿಂದ ಹೊರಟು 9.30ಕ್ಕೆ ಜಗಳೂರು ತಲುಪಿ ಕಣ್ವಕುಪ್ಪೆ ಮಠಕ್ಕೆ ಭೇಟಿ ನೀಡುವರು.

# ಇಲ್ಲದೇ ಅರಾಜಕ ಪರಿಸ್ಥಿತಿ

**(1ನೇ ಪುಟದಿಂದ)** ತೆಗೆದುಕೊಂಡಿದ್ದಾರೆ.

ರಾಜ್ಯದಲ್ಲಿ ಮತ್ತೆ ಕೊರೊನಾ ಸೋಂಕು ಮತ್ತು ಸಾವಿನ ಸಂಖ್ಯೆ ಹೆಚ್ಚಾಗುತ್ತಿದೆ. ಗ್ರಾಮೀಣ ಪ್ರದೇಶಗಳಲ್ಲಿ ವ್ಯಾಪಕವಾಗಿ ಹರಡುತ್ತಿರುವ ಕೊರೊನಾ ಸೋಂಕಿನ ನಿಯಂತ್ರಣದ ಬಗ್ಗೆ ನಿಗಾ ವಹಿಸುವವರೇ ಇಲ್ಲವಾಗಿದೆ. ಕೊರೊನಾ ಮೂರನೇ ಅಲೆ ನಿರೀಕ್ಷೆಗಿಂತಲೂ ಬೇಗನೇ ಬಂದು ಅಪ್ಪಳಿಸುವ ಸಾಧ್ಯತೆ ಇದೆ ಎಂದು ತಜ್ಞರು ಎಚ್ಚರಿಸುತ್ತಲೇ ಇದ್ದಾರೆ. ವ್ಯಾಕ್ಸಿನ್ ಪೂರೈಕೆಯಲ್ಲಿನ ಕೊರತೆ, ಡೋಸ್ ಅವಧಿಯ ಬಗೆಗಿನ ಗೊಂದಲ ಮತ್ತು ಖಾಸಗಿ ಹಾಗೂ ಸರ್ಕಾರಿ ಆಸ್ಪತ್ರೆಗಳ ನಡುವಿನ ತಿಕ್ಕಾಟಗಳಿಂದಾಗಿ ವ್ಯಾಕ್ಸಿನ್ ನೀಡುವ ಕೆಲಸವೂ ಕುಂಟುತ್ತಾ ಸಾಗಿದೆ.

ಪರಸ್ಪರ ಕಚ್ಚಾಟದಲ್ಲಿ ತೊಡಗಿರುವ ರಾಜ್ಯದ ಬಿಜೆಪಿ ನಾಯಕರಿಗೆ ಕಿವಿ ಹಿಂಡಿ ಬುದ್ದಿ ಹೇಳಬೇಕಾದ ಬಿಜೆಪಿಯ ಹೈಕಮಾಂಡ್ ತಾನೇ ರಾಜ್ಯದ ನಾಯಕರನ್ನು ಪರಸ್ಪರ ಎತ್ತಿಕಟ್ಟಿ ಕಳ್ಳಾಟ ಆಡುತ್ತಿದೆ. ಈ ಭಿನ್ನಮತವನ್ನು ನಿಯಂತ್ರಿಸಲಿಕ್ಕಾಗದ ನರೇಂದ್ರ ಮೋದಿಯವರು ತಾವೊಬ್ಬ ದುರ್ಬಲ ನಾಯಕನೆಂದು ತಾವೇ ಸಾಬೀತುಪಡಿಸಿಕೊಳ್ಳುತ್ತಿದ್ದಾರೆ. 56 ಇಂಚಿನ ಎದೆಯವನು ಎಂದು ಕೊಚ್ಚಿಕೊಳ್ಳುತ್ತಿರುವ ಮೋದಿಯವರು ತನ್ನ ಎದೆ ಸುತ್ತಳತೆ ಎಷ್ಟಿದೆ ಎನ್ನುವುದನ್ನಾದರೂ ಅವರು ಸ್ಪಷ್ಟಪಡಿಸಲಿ ಎಂದವರು ಲೇವಡಿ ಮಾಡಿದ್ದಾರೆ.

# ಸರ್ಕಾರ ಉಪಯೋಗವಿಲ್ಲ

**(1ನೇ ಪುಟದಿಂದ)** ಬಿಜೆಪಿ, ನಾಯಕತ್ವವೇ ಇಲ್ಲದ ಈ ಸರ್ಕಾರವನ್ನು ಅದು ಹೇಗೆ ಸಹಿಸಿಕೊಂಡಿದೆ? ನಾಯಕತ್ವ ಸರಿ ಇಲ್ಲ ಎಂದು ಶಾಸಕರೇ ಹೇಳುತ್ತಿರುವಾಗ ನಾಯಕತ್ವ ಬದಲಿಸಲು ಏಕೆ ಇಷ್ಟು ತಿಣುಕಾಡುತ್ತಿದೆ. ಹಾಗೊಂದು ನಾಯಕತ್ವವೇ ಇಲ್ಲದ ಮೇಲೆ ಬಿಜೆಪಿ ಸರ್ಕಾರ ವಿಸರ್ಜಿಸಿ, ಅಧಿಕಾರದಿಂದ ದೂರ ಉಳಿಯಬಾರದೇಕೆ? ಎಂದು ಪ್ರಶ್ನಿಸಿದ್ದಾರೆ.


ನಾವಿಕನಿಲ್ಲದ ನಾವೆ, ಯಜಮಾನನಿಲ್ಲದ ಮನೆ, ನಾಯಕನಿಲ್ಲದ ಸರ್ಕಾರ ಇದು ಅಪಾಯಕಾರಿ. ಅದೂ ಸಾಂಕ್ರಾಮಿಕ ಕಾಲದಲ್ಲಿ ಮತ್ತಷ್ಟು ಅಪಾಯಕಾರಿ. ಈಗಿನ ಸರ್ಕಾರದ ನಾಯಕತ್ವ ಸರಿ ಇಲ್ಲ ಎಂದು ಬಿಜೆಪಿ ಶಾಸಕರೇ ಬಂಡೆದಿದ್ದಾರಂತೆ. ಇರುವವರನ್ನು ಬದಲಿಸಲು ನಾಯಕರು ಯಾರೂ ಇಲ್ಲವಂತೆ. ಹಾಗಾಗಿ ಈ ಸರ್ಕಾರ ಜನರ ಪಾಲಿಗೆ ಅಪಾಯಕಾರಿಯಾಗಿದೆ ಎಂದರ್ಥ ಎಂದು ಅವರು ವ್ಯಾಖ್ಯಾನಿಸಿದ್ದಾರೆ.

ಬಿಜೆಪಿ ಆಡಳಿತದಿಂದ ಈಗ ಜನರಿಗೆ ವೈರಾಗ್ಯ ಬಂದಿದೆ. ಈ ವೈರಾಗ್ಯದ ಹಿಂದಿನ ಶಕ್ತಿಯಾಗಿರುವ ಕಾಂಗ್ರೆಸ್ ಈಗ ಆತ್ಮಾವಲೋಕನ ಮಾಡಿಕೊಳ್ಳಲಿದೆಯೇ? ತಾನು ಮಾಡಿದ ತಪ್ಪಿನಿಂದ ಉಂಟಾದ ಅನಾಹುತದ ಬಗ್ಗೆ ಕಾಂಗ್ರೆಸ್ ಗೆ ಈಗ ಪಶ್ಚಾತ್ತಾಪ ಮೂಡಿದಂತಿದೆ. ಆದರೆ ಈ ಅನಾಹುತದ ಹೊಣೆಗಾರ ಕಾಂಗ್ರೆಸ್ ಎಂಬುದನ್ನು ಮಾತ್ರ ಅದರ ನಾಯಕರು ಎಂದಿಗೂ ಮರೆಯಬಾರದು ಎಂದು ಅವರು ಹೇಳಿದ್ದಾರೆ.

# ರಾಮದೇವ್ ವಿರುದ್ಧ ಎಫ್.ಐ.ಆರ್.

**(1ನೇ ಪುಟದಿಂದ)** ಯಾದವ್ ತಿಳಿಸಿದ್ದಾರೆ.

ಕಳೆದ ಒಂದು ವರ್ಷದಿಂದ ರಾಮದೇವ್ ಸಾಮಾಜಿಕ ಮಾಧ್ಯಮಗಳ ಮೂಲಕ ಕೇಂದ್ರ ಸರ್ಕಾರ, ಐ.ಸಿ.ಎಂ.ಆರ್. ಹಾಗೂ ಇತರೆ ಮುಂಚೂಣಿ ಸಂಘಟನೆಗಳು ಕೊರೊನಾ ಸೋಂಕಿಗೆ ನೀಡುತ್ತಿರುವ ಔಷಧಿಗಳ ವಿರುದ್ಧ ಅಪಪ್ರಚಾರ ಮಾಡುತ್ತಿದ್ದಾರೆ ಎಂದು ದೂರಿನಲ್ಲಿ ಹೇಳಲಾಗಿದೆ.






## ಕೋವಿಡ್ : ಎಸ್ಸೆಸ್ ಜನಕಲ್ಯಾಣ ಟ್ರಸ್ಟ್ ಸ್ಕಾಲರ್ ಶಿಪ್



ದಾವಣಗೆರೆ, ಜೂ.17- ಕೊರೊನಾ ಸೋಂಕಿನಿಂದ ತಾಯಿ-ತಂದೆಯನ್ನು ಕಳೆದುಕೊಂಡಿರುವ ದಾವಣಗೆರೆ ಜಿಲ್ಲೆಯ ಅನಾಥ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಶಾಮನೂರು ಶಿವಶಂಕರಪ್ಪ ಜನ ಕಲ್ಯಾಣ ಟ್ರಸ್ಟ್‌ನಿಂದ ವಿಶೇಷ ಸ್ಕಾಲರ್ ಶಿಪ್ ನೀಡಲಾಗುವುದು ಎಂದು ಟ್ರಸ್ಟ್‌ನ ಪ್ರಧಾನ ಕಾರ್ಯದರ್ಶಿಯೂ ಆಗಿರುವ ಕೈಗಾರಿಕೋದ್ಯಮಿ ಅಥಣಿ ಎಸ್. ವೀರಣ್ಣ ತಿಳಿಸಿದ್ದಾರೆ.

ಅರ್ಹ ಫಲಾನುಭವಿ ಮಕ್ಕಳು ತಮ್ಮ ವಿವರಗಳನ್ನು ಆನ್‌ಲೈನ್ ಮೂಲಕ ಕಳಿಸಬಹುದು. ಟ್ರಸ್ಟ್‌ನ ವೆಬ್‌ಸೈಟ್ ssjanakalyantrust.org ನಲ್ಲಿ ಇದೇ ದಿನಾಂಕ 20 ರಿಂದ ಲಭ್ಯವಾಗುವ ಅರ್ಜಿಯಲ್ಲಿ ಮಾಹಿತಿ ತುಂಬಿ ಸಲ್ಲಿಸಬಹುದು ಎಂದು ಅವರು ಪತ್ರಿಕಾ ಹೇಳಿಕೆಯಲ್ಲಿ ವಿವರಿಸಿದ್ದಾರೆ.

## ದೇಶಾದ್ಯಂತ ಏಕರೂಪದ ಮಾಲಿನ್ಯ ಪ್ರಮಾಣ ಪತ್ರ

ನವದೆಹಲಿ, ಜೂ. 17 – ದೇಶಾದ್ಯಂತ ಇರುವ ಎಲ್ಲಾ ವಾಹನಗಳಿಗೆ ಏಕರೂಪದ ಮಾಲಿನ್ಯ ನಿಯಂತ್ರಣ ಪ್ರಮಾಣ ಪತ್ರಕ್ಕಾಗಿ ಕೇಂದ್ರ ಸಾರಿಗೆ ಸಚಿವಾಲಯ ಆದೇಶ ಹೊರಡಿಸಿದೆ. ಇದೇ ವೇಳೆ ಮಾಲಿನ್ಯ ನಿಯಂತ್ರಣ ಪ್ರಮಾಣ ಪತ್ರದ ಮಾಹಿತಿಯನ್ನು ರಾಷ್ಟ್ರೀಯ ರಿಜಿಸ್ಟ್ರಾರ್ ಜೊತೆ ಜೋಡಣೆ ಮಾಡಲಾಗುವುದು.

ಕೇಂದ್ರ ಮೋಟಾರು ವಾಹನಗಳ ನಿಯಮಕ್ಕೆ ತಿದ್ದುಪಡಿ ತರುವ ಮೂಲಕ ಈ ಬದಲಾವಣೆ ಮಾಡಲಾಗಿದೆ. ಪ್ರಮಾಣ ಪತ್ರಗಳ ಮೇಲೆ ಕ್ಯೂ.ಆರ್. ಕೋಡ್ ಪ್ರಕಟಿಸಲಾಗುವುದು. ಇದರಲ್ಲಿ ವಾಹನ, ಮಾಲೀಕ ಹಾಗೂ ಮಾಲಿನ್ಯದ ವಿವರಗಳು ಇರಲಿವೆ. ಈ ಬಗ್ಗೆ ಜೂನ್ 14ರಂದು ಅಧಿಸೂಚನೆ ಹೊರಡಿಸಲಾಗಿದೆ.


ನೂತನ ಪ್ರಮಾಣ ಪತ್ರಗಳಲ್ಲಿ ವಾಹನಗಳ ಮಾಲೀಕರ ಮೊಬೈಲ್ ಸಂಖ್ಯೆ, ಹೆಸರು, ವಿಳಾಸ, ಇಂಜಿನ್ ಸಂಖ್ಯೆ ಹಾಗೂ ಚಾಸಿಸ್ ಸಂಖ್ಯೆ ಇರಲಿದೆ. ಮಾಲೀಕರ ಮೊಬೈಲ್ ಸಂಖ್ಯೆ ಕಡ್ಡಾಯವಾಗಿದೆ. ಈ ಮೊಬೈಲ್‌ಗೆ ಎಸ್.ಎಂ.ಎಸ್. ಅಲರ್ಟ್ ಮೂಲಕ ಖಚಿತ ಪಡಿಸಿಕೊಳ್ಳಲಾಗುವುದು ಎಂದು ತಿಳಿಸಲಾಗಿದೆ. ಇದೇ ಮೊದಲ ಬಾರಿಗೆ ವಾಹನದ ಟೆಸ್ಟ್ ವಿಫಲವಾದರೆ ಅದಕ್ಕೂ ರಸೀದಿ ನೀಡಲಾಗುವುದು ಎಂದೂ ಸಹ ತಿಳಿಸಲಾಗಿದೆ.




## ಸ್ವಿಸ್ ಬ್ಯಾಂಕ್‌ನಲ್ಲಿ ಭಾರತೀಯರ ಹಣ ಹೆಚ್ಚಳ

ನವದೆಹಲಿ ಜೂ., 17 – ಸ್ವಿಸ್ ಬ್ಯಾಂಕ್‌ನಲ್ಲಿ ಭಾರತೀಯರು ಹಾಗೂ ಉದ್ಯಮಗಳು ಇರಿಸಿರುವ ಹಣ 2020ರಲ್ಲಿ 20,700 ಕೋಟಿ ರೂ.ಗಳಿಗೆ ಹೆಚ್ಚಾಗಿದೆ. ಗ್ರಾಹಕರ ಠೇವಣಿ ಕಡಿಮೆಯಾಗಿದೆಯಾದರೂ, ಸೆಕ್ಯುರಿಟಿ ಮತ್ತಿತರೆ ಮಾರ್ಗಗಳ ಮೂಲಕ ಇರಿಸಿರುವ ಠೇವಣಿ ಹೆಚ್ಚಾಗಿದೆ. ಪ್ರಸಕ್ತ ಸ್ವಿಸ್ ಬ್ಯಾಂಕ್‌ನಲ್ಲಿ 2.55 ಶತಕೋಟಿ ಸ್ವಿಸ್ ಫ್ರಾಂಕ್ (20,700 ಕೋಟಿ ರೂ.) ಹಣ ಇದೆ.










JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte